17 ಸೆಪ್ಟೆಂಬರ್ 2025 ಬುಧವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 189 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629

ಜನಮನದ ದನಿ

# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ



ನಟ, ನಿರ್ದೇಶಕ ರಾಬರ್ಟ್ ರೆಡ್ ಫೋರ್ಡ್ (89) ಅವರು ಅಮೇರಿಕಾದ ಒರೆಮ್ ನಗರದ ಉತಾಹ್‌ನಲ್ಲಿರುವ ತಮ್ಮ ನಿವಾಸದಲ್ಲಿ ಮಂಗಳವಾರ ನಿಧನರಾಗಿದ್ದಾರೆ.



ಆರಂಭದಿಂದಲೇ ರೋಗಿಯ ಸುರಕ್ಷತೆ ! » 2




ಅಪಘಾತ : ಹೆಚ್ಚುವರಿ 1ಲಕ್ಷ ರೂ. ನೆರವು » 3



ಐಸಿಸಿ ರ್‍ಯಾಂಕಿಂಗ್ : ಮಂದಾನಗೆ ಅಗ್ರಸ್ಥಾನ » 4

# ಜಾತಿ ಗಣತಿ: ಬಿರುಕು ಮೂಡಿಸುವ ಕುತಂತ್ರ

## ವೀರಶೈವ-ಲಿಂಗಾಯತ ಸಮುದಾಯದ ನಾಯಕರ ಕಿಡಿ | ಸ್ವಾಮೀಜಿ ಸೂಚನೆ ಪಾಲಿಸಲು ಸಭೆಯಲ್ಲಿ ನಿರ್ಧಾರ

• ಪ್ರಜೋದಯ ವರದಿ

**ಬೆಂಗಳೂರು:** ಜಾತಿ ಗಣತಿ ಹೆಸರಿಲ್ಲಿ ವೀರಶೈವ-ಲಿಂಗಾಯತ ಸಮು ದಾಯದಲ್ಲಿ ಬಿರುಕು ಮೂಡಿಸುವ ಕುತಂತ್ರ ನಡೆಸುತ್ತಿದೆ ಎಂದು ಬಿಜೆಪಿ ಲಿಂಗಾಯತ ನಾಯಕರು ಖಂಡಿಸಿ, ಸಮುದಾಯದ ಸ್ವಾಮೀಜಿಗಳು ನೀಡುವ ಸೂಚನೆ ಪಾಲಿಸುವಂತೆ ನಾಯಕರು ತಿಳಿಸಿದ್ದಾರೆ.

ಬುಧವಾರ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಮಾಜಿ ಮುಖ್ಯಮಂತ್ರಿಗಳಾದ ಬಸವ ರಾಜ ಬೊಮ್ಮಾಯಿ, ಜಗದೀಶ್ ಶೆಟ್ಟರ್, ಕೇಂದ್ರ ಸಚಿವರು ವಿ.ಸೋಮಣ್ಣ, ಕೇಂದ್ರ ಮಾಜಿ ಸಚಿವ ರಾದ ಜಿ.ಎಂ. ಸಿದ್ದೇಶ್ವರ್, ಮಾಜಿ ರಾಜ್ಯಸಭಾ ಸದಸ್ಯರಾದ ಪ್ರಭಾಕರ್ ಕೋರೆ, ವಿಜಯ್ ಸಂಕೇಶ್ವರ್ ಸೇರಿ ಸಂಸದರು, ಶಾಸಕರು ಹಾಗು ಪ್ರಮುಖರು ಭಾಗವಹಿಸಿದ್ದರು.

ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ವೀರಶೈವ-ಲಿಂಗಾಯತ ಸಮು ದಾಯವನ್ನು ಒಡೆಯುವ ಕೆಲಸವನ್ನು ಸಿದ್ದರಾಮಯ್ಯ ಮಾಡುತ್ತಿದ್ದಾರೆ. ಇಲ್ಲದಿರುವ ಜಾರಿ ಸೇರಿಸಿ ಜಾತಿ ನಡುವೆ ಸಂಘರ್ಷ ಉಂಟು ಮಾಡಿ ತಮ್ಮ ರಾಜಕೀಯ ರೊಟ್ಟಿ ಸುಟ್ಟು ಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ದೇಶದಲ್ಲಿ ಗಣತಿ ಕಾಯ್ದೆ ಇದೆ. ಅದರ ಪ್ರಕಾರ ಕೇಂದ್ರ ಸರ್ಕಾರ ಗಣತಿ ಮಾಡುತ್ತದೆ. ರಾಜ್ಯ ಸರ್ಕಾರ ಸರ್ವೆ ಮಾಡಬಹುದು. ಆದರೆ, ಇವರು ಮನೆ ಮನೆಗೆ ಹೋಗುವುದು ಗಣತಿ ಕಾಯ್ದೆಯ ವಿರುದ್ಧ ಇದೆ ಎಂದು ಹೇಳಿದರು.

**ಸಂವಿಧಾನದಲ್ಲಿ 6 ಇವೆ ; ಇಲ್ಲಿ ಏಕೆ 7**

ಸಂವಿಧಾನದಲ್ಲಿ ಕೇವಲ ಆರು ಧರ್ಮ ಇದೆ. ರಾಜ್ಯ ಸರ್ಕಾರ ಜಾತಿ ಸಮೀಕ್ಷೆಯಲ್ಲಿ ಇತರರು, ನಾಸ್ತಿಕರು ಅಂತ ಸೇರಿಸಿದ್ದಾರೆ. ನಾಸ್ತಿಕರಿಗೆ ಧರ್ಮ ಇಲ್ಲ. ಕ್ರಿಶ್ಚಿಯನ್ ಬ್ರಾಹ್ಮಣ, ಕ್ರಿಶ್ಚಿಯನ್ ಲಿಂಗಾಯತ ಅಂತ ಏಕೆ ಕಾಲಂ ಮಾಡಿದ್ದಾರೆ. ಮತಾಂತರ ಹೊಂದಿದವರಿಗೆ ಪ್ರತ್ಯೇಕ ಕಾಲಂ ಮಾಡಬೇಕು ಅಂತ ಯಾವ ಸಂವಿಧಾನದಲ್ಲಿ ಹೇಳಿದೆ. ಸಂವಿಧಾನದ ಬಗ್ಗೆ ಮಾತನಾಡುತ್ತ ಸಂವಿಧಾನ ವಿರೋಧಿ ಕೆಲಸ ಮಾಡುತ್ತಿ ದ್ದಾರೆ. ಇದನ್ನು ನಾವು ಖಂಡಿಸುತ್ತೇವೆ. ಜಾತಿ ಸಮೀಕ್ಷೆಯಲ್ಲಿ ಬಹಳಷ್ಟು ಲೋಪಗಳಿವೆ ಎಂದು ಅನೇಕ ಸ್ವಾಮೀಜಿಗಳು ಹೇಳಿದ್ದಾರೆ. ಅವುಗಳನ್ನು ಸರಿಪಡಿಸುವ ಕೆಲಸ ಮಾಡಬೇಕೆಂದು ಹೇಳಿದ್ದಾರೆ ಎಂದರು.

ವೀರಶೈವ-ಲಿಂಗಾಯತ ಒಡೆ ಯುವ ಕೆಲಸವನ್ನು ಸಿದ್ದರಾಮಯ್ಯ ಮಾಡುತ್ತಿದ್ದಾರೆ. ವೀರಶೈವ -ಲಿಂಗಾಯತ ಸಮುದಾಯದ ಜನರು ಜಾಗೃತರಾಗಿದ್ದಾರೆ. ನಿಮ್ಮ ರಾಜಕೀಯ ಹುನ್ನಾರಕ್ಕೆ ಅವರು ಬಲಿಯಾಗುವುದಿಲ್ಲ. 2018 ರಲ್ಲಿ ಜನರು ಒಮ್ಮೆ ಪಾಠ ಕಲಿಸಿದ್ದಾರೆ. ನಮ್ಮ ಧರ್ಮ ಮತ್ತು ಸಮಾಜವನ್ನು ಒಡೆಯುವ ಕೆಲಸ ಮಾಡಬೇಡಿ ಎಂದು ಹೇಳಿದ್ದಾರೆ. ಈಗ ಮತ್ತೆ ಅದೇ ಕೆಲಸ ಮಾಡುತ್ತಿದ್ದಾರೆ. ಸಮಾಜ ಒಗ್ಗೂಡಿಸಿ ಆಡಳಿತ ಮಾಡುವುದನ್ನು ಬಿಟ್ಟು, ಸಮಾಜ ಒಡೆದು ತಮ್ಮ ರಾಜಕೀಯ ರೊಟ್ಟಿ ಸುಟ್ಟುಕೊಳ್ಳುವ ಕೆಲಸ ಮಾಡುತ್ತಿರುವುದನ್ನು ಜನರು ಸಂಪೂರ್ಣವಾಗಿ ತಿರಸ್ಕಾರ ಮಾಡುತ್ತಾರೆನ್ನುವ ವಿಶ್ವಾಸ ಇದೆ ಎಂದರು.

**ಮಠಾಧೀಶರ ಮಾರ್ಗದರ್ಶ**

ಈ ಬಗ್ಗೆ ಟ್ವೀಟ್ ಮಾಡಿರುವ ಬಿ.ವೈ. ವಿಜಯೇಂದ್ರ ಅವರು, ಕಾಂಗ್ರೆಸ್ ಸರ್ಕಾರ ಜನಗಣತಿಯ ನೆಪದಲ್ಲಿ ಗೊಂದಲ ಮೂಡಿಸು ವ ಕುತಂತ್ರವನ್ನು ಮೆಟ್ಟಿ ನಿಲ್ಲುವ ನಿಟ್ಟಿನಲ್ಲಿ ಸಮುದಾಯದ ಮಠಾಧೀಶರ ಮಾರ್ಗದರ್ಶನದಲ್ಲಿ ಒಟ್ಟಾಗಿ ಮುನ್ನಡೆ ಯಲು ತೀರ್ಮಾನಿಸಲಾಯಿತು ಎಂದರು.



**ಮಹಾಸಭಾ ನಿರ್ಣಯ ಏನು?**

ಸಮೀಕ್ಷೆ ವೇಳೆ ಧರ್ಮದ ಕಾಲಂನಲ್ಲಿ ಕಡ್ಡಾಯವಾಗಿ ವೀರಶೈವ-ಲಿಂಗಾಯತ ಎಂದು ನಮೂದಿಸಬೇಕೆಂದು ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭೆ ಪ್ರಧಾನ ಕಾರ್ಯದರ್ಶಿ ಈಶ್ವರ ಖಂಡ್ರೆ ಹೇಳಿದ್ದಾರೆ. ಸರ್ಕಾರ ಪ್ರಕಟಿಸಿರುವ 7 ಧರ್ಮಗಳ ಹೊರತಾಗಿ ಇತರೆ ಧರ್ಮಗಳಿದ್ದಲ್ಲಿ ಅವುಗಳನ್ನು ನಮೂದಿಸಲು ಆಯೋಗವು ಅವಕಾಶ ಮಾಡಿಕೊಟ್ಟಿದೆ ಎಂದು ತಿಳಿಸಿದ್ದಾರೆ.

**ಧರ್ಮವ್ರೋ... ಜಾತಿಯೋ... ಎಂಬುದೇ ಪ್ರಶ್ನೆ**

ರಾಜ್ಯದಲ್ಲಿ ಸೆ.22 ರಿಂದ ಜಾತಿ ಗಣತಿ ಆರಂಭವಾಗುತ್ತಿದೆ. ಈ ನಡುವೆ ನಾಡಿನ ದೊಡ್ಡ ಸಮುದಾಯಗಳಲ್ಲಿ ಒಂದಾದ ಲಿಂಗಾಯಿತರು ಏನೆಂದು ನಮೂದಿಸಬೇಕು, ಧರ್ಮವೋ, ಜಾತಿಯೋ ಎಂಬ ಪ್ರಶ್ನೆಯ ಮೂಡಿದೆ. ಹಿಂದಿನ ಸಮೀಕ್ಷೆಯ ಅಂಕಿ ಅಂಶದಂತೆ 65 ಲಕ್ಷಕ್ಕೂ ಅಧಿಕ ಜನರಿರುವ ಲಿಂಗಾಯಿತರು ಈ ಬಾರಿಯ ಗಣತಿಯಲ್ಲಿ ಏನೆಂದು ನಮೂದಿಸಬೇಕೆಂಬ ಗೊಂದಲದಲ್ಲಿದ್ದಾರೆ. ಪ್ರಮುಖ ಮಠಗಳ ಸ್ವಾಮೀಜಿಗಳು ಲಿಂಗಾಯತ ಒಂದು ಧರ್ಮ ಎಂದರೆ, ರಾಜಕೀಯ ಪಕ್ಷದ ಕೆಲ ನಾಯಕರು ಹಿಂದೂ ಧರ್ಮವಾಗಿದ್ದು, ಜಾತಿ ಕಾಲಂನಲ್ಲಿ ವೀರಶೈವ-ಲಿಂಗಾಯತ ಎಂದು ಬರೆಸಿ ಎನ್ನುತ್ತಿದ್ದಾರೆ.

# ಹಾಸನಾಂಬ ಉತ್ಸವಕ್ಕೆ ಸಿಎಂ, ಡಿಸಿಎಂಗೆ ಆಹ್ವಾನ

## ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಜಿಲ್ಲಾಡಳಿತ ಸಮಾಲೋಚನೆ



• ಪ್ರಜೋದಯ ವರದಿ

**ಹಾಸನ :** ವರ್ಷಕ್ಕೊಮ್ಮೆ ದರ್ಶನ ನೀಡುವ ಹಾಸನಾಂಬ ದರ್ಶನೋತ್ಸವಕ್ಕೆ ಜಿಲ್ಲಾಡಳಿತದ ವತಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರಿಗೆ ಮಂಗಳವಾರ ಅಧಿಕೃತ ಆಹ್ವಾನ ನೀಡಲಾಯಿತು.

ಅ.9 ರಿಂದ 23ರ ವರೆಗೆ ಜರುಗಲಿರುವ ಹಾಸನಾಂಬ ಮತ್ತು ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವಂತೆ ಸಂಸದ ಶ್ರೇಯಸ್ ಪಟೇಲ್, ಗೃಹ ಮಂಡಳಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ, ದೇವಾಲಯದ ಆಡಳಿತಾಧಿಕಾರಿ ಮಾರುತಿ ಅವರು ಬೆಂಗಳೂರಿಗೆ ಭೇಟಿ ನೀಡಿ ಗಣ್ಯರಿಗೆ ಆಹ್ವಾನ ನೀಡಿದರು.

ಮೊದಲು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರಿಗೆ ಆಮಂತ್ರಣ ನೀಡಿದ ಜಿಲ್ಲಾಡಳಿತ ಹಾಗು ಜನಪ್ರತಿನಿಧಿಗಳು ನಂತರ ಉಸ್ತುವಾರಿ ಸಚಿವರ ಜೊತೆಗೂಡಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಮೊದಲಾದವರಿಗೆ ಆಹ್ವಾನ ಪತ್ರಿಕೆ ನೀಡಿ ಹಾಸನಾಂಬ ಉತ್ಸವಕ್ಕೆ ಆಗಮಿಸುವಂತೆ ಸ್ವಾಗತಿಸಿದರು.

ಜಿಲ್ಲಾ ಉಸ್ತುವಾರಿ ಸಚಿವರು ಅಧಿಕಾರಿಗಳೊಂದಿಗೆ ಹಾಸನಾಂಬ ಉತ್ಸವ ಸಿದ್ಧತೆ ಕುರಿತು ಸಮಾಲೋಚನೆ ನಡೆಸಿ, ಈವರೆಗೆ ಆಗಿರುವ ಪೂರ್ವ

» ನಾಲ್ಕನೇ ಪುಟದಲ್ಲಿ

# ಹಿಂದೂ ಜನಸಂಖ್ಯೆ ಕುಸಿದರೆ ನರಮೇಧ ನಡೆಯುತ್ತೆ

## ಒಟ್ಟಾಗದಿದ್ದರೆ ದೇಶ, ಧರ್ಮ, ಕಡೆಗೆ ನಾವೂ ಉಳಿಯಲ್ಲ: ಸಿ.ಟಿ.ರವಿ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಹಿಂದೂ ಜನಸಂಖ್ಯೆ ಕುಸಿದರೆ ನರಮೇಧ ನಡೆಯುತ್ತೆ, ನಮ್ಮ ದೇವಾಲಯಗಳು ಉಳಿಯುವುದಿಲ್ಲವೆಂದು ಮಾಜಿ ಸಚಿವ ಸಿ.ಟಿ.ರವಿ ಅವರು ಎಚ್ಚರಿಸಿದರು.

ಹಿರೀಸಾವೆಯಲ್ಲಿ ಗಣೇಶೋತ್ಸವದಲ್ಲಿ ಮಾತನಾಡಿದ ಅವರು, ಜನಸಂಖ್ಯೆ ಕಡಿಮೆಯಾದರೆ ದೇಶ, ಸಂಸ್ಕೃತಿ ಕಳೆದುಕೊಳ್ಳುತ್ತೇವೆ. ದೇಶದಲ್ಲಿ ಹಿಂದೂ ಸಮಾಜವನ್ನು ದುರ್ಬಲಗೊಳಿಸುವ ಷಡ್ಯಂತ್ರ ನಡೆಯುತ್ತಿದ್ದು, ನಾವು ಒಟ್ಟಾಗದಿದ್ದರೆ ದೇಶ, ಧರ್ಮ, ಕಡೆಗೆ ನಾವೂ ಉಳಿಯಲ್ಲ ಎಂದರು.

ಹಿಂದುತ್ವದ ಭಾವ ಬೆಳೆಸದಿದ್ದರೆ

» ನಾಲ್ಕನೇ ಪುಟದಲ್ಲಿ



**ಸರ್ಕಾರ ಮಾನವೀಯತೆ ಪ್ರದರ್ಶಿಸಲಿ**

ಮೊಸಳೆಹೊಸಳ್ಳಿಯಲ್ಲಿ ಟ್ರಕ್ ಅಪಘಾತದಲ್ಲಿ ಗಾಯಗೊಂಡವರ ಪೋಷಕರು ಚಿಕಿತ್ಸಾ ವೆಚ್ಚ ಭರಿಸಲು ಪರದಾಡುತ್ತಿರುವ ವಿಚಾರವಾಗಿ ಪ್ರತಿಕ್ರಿಯಿಸಿದ ಸಿ.ಟಿ.ರವಿ ಅವರು, ರಾಜ್ಯ ಸರ್ಕಾರ ಮಾನವೀಯತೆ ಪ್ರದರ್ಶನ ಮಾಡಬೇಕು. ಪೂರ್ಣ ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ಭರಿಸಬೇಕೆಂದು ಮುಖ್ಯಮಂತ್ರಿಗಳಿಗೆ ವಿನಮ್ರ ಪೂರ್ವ ಮನವಿ ಮಾಡುತ್ತೇನೆ. ಸರ್ಕಾರವೇ ಚಿಕಿತ್ಸಾ ವೆಚ್ಚ ಭರಿಸಲು ನಾನು ಕೂಡ ಒತ್ತಡ ಹಾಕುತ್ತೇನೆ, ಚಿಕಿತ್ಸಾ ವೆಚ್ಚ ಭರಿಸಿ ಮಾನವೀಯತೆ ಪ್ರದರ್ಶಿಸಿ ಎಂದು ಮನವಿ ಮಾಡಿದರು.

# ಸೆ.22 ರಂದು ರೈತರ ಕುಂದು ಕೊರತೆ ಸಭೆ

• ಪ್ರಜೋದಯ ವರದಿ

**ಹಾಸನ :** ತಾಲ್ಲೂಕಿನ ಎಲ್ಲಾ ರೈತಾಪಿ ವರ್ಗಕ್ಕೆ ದೊರೆಯಬೇಕಾದ ಸೌಲಭ್ಯಗಳು ನಿಗದಿತ ಅವಧಿಯೊಳಗೆ ದೊರೆಯದಿದ್ದಾಗ ತಮ್ಮ ಅಹವಾಲು ಸಲ್ಲಿಸಲು, ಸಮಸ್ಯೆಗಳ ಪರಿಹಾರಕ್ಕಾಗಿ ನೇರವಾಗಿ ತಮ್ಮ ಅಹವಾಲು ದಾಖಲಿಸಲು ತಾಲ್ಲೂಕು ಮಟ್ಟದಲ್ಲಿ ಪ್ರತಿ ಮಾಹೆಯ 3ನೇ ಸೋಮವಾರ ಬೆಳಿಗ್ಗೆ 11 ಗಂಟೆಗೆ ತಾಲ್ಲೂಕು ಪಂಚಾಯಿತಿ ಕಾರ್ಯಾಲಯ, ಹಾಸನ. ಇಲ್ಲಿ ರೈತರ ಕುಂದು ಕೊರತೆ ಸಭೆ ಆಯೋಜಿಸಿಲಾಗುವುದು.

ಈ ಮಾಹೆಯ ಸಭೆಯನ್ನು ಸೆ.22 ರಂದು ಆಯೋಜಿಸಲಾಗಿದೆ. ಸಾರ್ವಜನಿಕರು ಖುದ್ದು ಹಾಜರಾಗಿ ತಮ್ಮ ಅಹವಾಲನ್ನು ಸಲ್ಲಿಸಲು ತಾಲ್ಲೂಕು ತಹಶೀಲ್ದಾರ್ ತಿಳಿಸಿದ್ದಾರೆ.

# ಇಂದು ಮೇಯರ್ ಸ್ಥಾನಕ್ಕೆ ಚುನಾವಣೆ

## ರಾತ್ರಿಯವರೆಗೂ ಜೆಡಿಎಸ್ ಸದಸ್ಯರೊಂದಿಗೆ ಸಭೆ ನಡೆಸಿದ ಮಾಜಿ ಸಚಿವ ಹೆಚ್.ಡಿ.ರೇವಣ್ಣ

• ಪ್ರಜೋದಯ ವರದಿ

**ಹಾಸನ:** ಮಹಾನಗರ ಪಾಲಿಕೆ ಮೇಯರ್ ಚುನಾವಣೆ ಬುಧವಾರ ನಡೆಯಲಿದ್ದು, ಮೇಯರ್ ಪಟ್ಟ ಯಾರಿಗೆ ಒಲಿಯಲಿದೆ ಎಂಬ ಕುತೂಹಲ ಕೆರಳಿದೆ.

ಮೇಯರ್ ಚುನಾವಣೆ ಸಂಬಂಧ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಜೆಡಿಎಸ್ ಸದಸ್ಯರೊಂದಿಗೆ ಮಂಗಳವಾರ ರಾತ್ರಿಯವರೆಗೂ ಸಭೆ ನಡೆಸಿ, ಮೇಯರ್ ಯಾರಾಗಬೇಕೆಂಬ ನಿರ್ಧಾರವನ್ನು ಬೆಳಿಗ್ಗೆ ಪ್ರಕಟಿಸಲಿದ್ದು, ಪಕ್ಷದ ವರಿಷ್ಠರು ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧರಾಗಿ ಎಲ್ಲರೂ ಒಗ್ಗಟ್ಟಿನಿಂದ ಹೋಗುವಂತೆ ಸೂಚನೆ ನೀಡಿದ್ದಾರೆ.

ಸದಸ್ಯರಾದ ಗಿರೀಶ್ ಚನ್ನವೀರಪ್ಪ, ಅಮೀರ್ ಜಾನ್, ರಫಿಕ್, ಅಶ್ವಿನಿ ಮಹೇಶ್, ನವೀನ್ ನಾಗರಾಜು ಅವರು ಮೇಯರ್ ಸ್ಥಾನದ ಆಕಾಂಕ್ಷಿಗಳಾಗಿದ್ದಾರೆ. ಗಿರೀಶ್ ಚನ್ನವೀರಪ್ಪ, ಅಮೀರ್ ಜಾನ್, ರಫಿಕ್ ಅವರು ತಮಗೆ ಅವಕಾಶ ನೀಡಬೇಕೆಂದು ಪಟ್ಟು ಹಿಡಿದಿದ್ದಾರೆ. ಈ ಬಾರಿ ಮುಸ್ಲಿಂ ಸಮುದಾಯಕ್ಕೆ ಅವಕಾಶ ನೀಡುವಂತೆ ಅಲ್ಪಸಂಖ್ಯಾತ ಸಮುದಾಯದ ಮುಖಂಡರು ಮನವಿ ಮಾಡಿದ್ದಾರೆ. ಈ ನಡುವೆ ಜೆಡಿಎಸ್ ಮೈತ್ರಿ ಪಕ್ಷವಾಗಿರುವ ಬಿಜೆಪಿ ನಡೆ ಏನಾಗಲಿದೆ ಎಂಬುದು ಕೌತುಕವಾಗಿದೆ. ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಮ್ ಜೆ.ಗೌಡ ಅವರು ಯಾವ ರೀತಿ ದಾಳ ಉರುಳಿಸಲಿದ್ದಾರೆಂಬುದು ಕಾದುನೋಡಬೇಕಾಗಿದೆ.

**ತಟಸ್ಥ ನಿಲುವಿನಿಂದ ಅನರ್ಹ**

ಮೇಯರ್ ಆಗಿ ಪದೋನ್ನತಿ ಹೊಂದುವ ಮೊದಲು ನಗರಸಭೆ ಅಧ್ಯಕ್ಷರಾಗಿದ್ದ ಎಂ.ಚಂದ್ರೇಗೌಡ ಅವರ ವಿರುದ್ಧ ಅವಿಶ್ವಾಸ ಮಂಡನೆ ವೇಳೆ ಚಂದ್ರೇಗೌಡ ಅವರು ತಟಸ್ಥ ನಿಲುವು ತಾಳಿ, ವಿಫ್ ಉಲ್ಲಂಘಿಸಿದ ಆರೋಪದಡಿ ಸದಸ್ಯತ್ವ ಕಳೆದುಕೊಂಡು, ಮೇಯರ್ ಸ್ಥಾನದಿಂದ ಕೆಳಗಿಳಿದಿರುವುದರಿಂದ ಮೇಯರ್ ಸ್ಥಾನಕ್ಕೆ ಚುನಾವಣೆ ನಿಗದಿಯಾಗಿದೆ.

ಸದಸ್ಯತ್ವ ಅನರ್ಹ ಆದೇಶವನ್ನು ಪ್ರಶ್ನಿಸಿ ಚಂದ್ರೇಗೌಡ ಅವರು ಹೈಕೋರ್ಟ್ ಮೆಟ್ಟಿಲೇರಿದ್ದು, ವಿಚಾರಣೆ ನಡೆಸಿದ ನ್ಯಾಯಾಲಯ ಮೇಯರ್ ಚುನಾವಣೆಗೆ ತಡೆ ನೀಡಲು ಸಾಧ್ಯವಿಲ್ಲವೆಂದು ತಿಳಿಸಿ, ವಿಚಾರಣೆಯನ್ನು ಸೆ.19ಕ್ಕೆ ಮುಂದೂಡಿರುವುದರಿಂದ ಚಂದ್ರೇಗೌಡ ನಿರಾಸೆಗೊಂಡಿದ್ದಾರೆ.

**ಸದಸ್ಯರ ಸಂಖ್ಯಾಬಲ**

ಮಹಾನಗರ ಪಾಲಿಕೆಯು ಒಟ್ಟು 35 ಸದಸ್ಯರ ಸಂಖ್ಯಾ ಬಲವನ್ನು ಹೊಂದಿದ್ದು, ಕಾಂಗ್ರೆಸ್‌ನ ಇಬ್ಬರು, ಜೆಡಿಎಸ್‌ನ 17 ಸದಸ್ಯರು (ಚಂದ್ರೇಗೌಡ ಸದಸ್ಯತ್ವ ರದ್ದು), ಬಿಜೆಪಿಯ 13 ಸದಸ್ಯರು, ಮೂವರು ಪಕ್ಷೇತರ ಸದಸ್ಯರಿದ್ದಾರೆ. ಬಿಜೆಪಿಯ 13 ಸದಸ್ಯರ ಪೈಕಿ ಈಗಾಗಲೇ ಇಬ್ಬರು ಸದಸ್ಯರು ಜೆಡಿಎಸ್‌ನೊಂದಿಗೆ ಗುರುತಿಸಿಕೊಂಡಿದ್ದಾರೆ. ಮೂವರು ಪಕ್ಷೇತರರು ಕೂಡ ಜೆಡಿಎಸ್‌ನೊಂದಿಗೆ ಇದ್ದಾರೆ. ಲೋಕಸಭಾ ಸದಸ್ಯ, ಶಾಸಕ, ವಿಧಾನ ಪರಿಷತ್ ಸದಸ್ಯರು ಸೇರಿ ಸದಸ್ಯರ ಸಂಖ್ಯೆ 38ಕ್ಕೆ ಏರಿಕೆಯಾಗಲಿದೆ.

# ಜಿಲ್ಲೆಯ ವಿವಿಧೆಡೆ ಕಾಡಾನೆಗಳ ದಾಂಧಲೆ-ಬೆಳೆ ಹಾನಿ

## ಅರಕಲಗೂಡು, ಸಕಲೇಶಪುರ, ಬೇಲೂರು ತಾಲ್ಲೂಕಿನಲ್ಲಿ ಗುಂಪು-ಗುಂಪಾಗಿ ಸಂಚಾರ

• ಪ್ರಜೋದಯ ವರದಿ

**ಹಾಸನ:** ಬೇಲೂರು, ಅರಕಲಗೂಡು, ಸಕಲೇಶಪುರ ತಾಲ್ಲೂಕು ಭಾಗದಲ್ಲಿ ಕಾಡಾನೆಗಳ ಉಪಟಳ ಮಿತಿ ಮೀರಿದೆ. ಬೆಳೆ ಹಾನಿ ಜೊತೆಗೆ ಜನರಲ್ಲಿ ಜೀವಭಯವೂ ಹೆಚ್ಚಾಗಿದೆ.

ಬೇಲೂರು ತಾಲ್ಲೂಕಿನ ಮಲಸಾವರ ಗ್ರಾಮ ಹಾಗು ಕಾನನಹಳ್ಳಿಯಲ್ಲಿ ಕಾಡಾನೆಗಳು ಕಾಣಿಸಿಕೊಂಡು ಜನರಲ್ಲಿ ಆತಂಕ ಸೃಷ್ಟಿಸಿವೆ. ರಾತ್ರಿ ವೇಳೆ ಮಲಸಾವರ ಗ್ರಾಮದ ಮುಖ್ಯ ರಸ್ತೆಯಲ್ಲೇ ಮೂರು ಕಾಡಾನೆಗಳು ಸಂಚಾರ ಮಾಡುವ ದೃಶ್ಯವನ್ನು ಸ್ಥಳೀಯರು ತಮ್ಮ ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದಾರೆ.

ಅದೇ ರೀತಿ ಸಕಲೇಶಪುರ ತಾಲ್ಲೂಕಿನ ಮರ್ಜನಹಳ್ಳಿ ಗ್ರಾಮದ ಎಂ.ಎಸ್.ಪರಮೇಶ್ ಎಂಬುವವರಿಗೆ ಸೇರಿದ ಜಮೀನಿನಲ್ಲಿ ನಾಟಿ ಮಾಡಿದ್ದ ಭತ್ತದ ಗದ್ದೆಗಳನ್ನು ಕಾಡಾನೆಗಳ ಹಿಂಡು ತಿಂದು, ತುಳಿದು ನಾಶ ಮಾಡಿವೆ.

ಅರಕಲಗೂಡು ತಾಲ್ಲೂಕಿನ ಹೊಸನಗರ ಗ್ರಾಮದ ಬಳಿ ಮಂಗಳವಾರ ಬೆಳ್ಳಂಬೆಳಿಗ್ಗೆ ಕಾಡಾನೆಗಳ ಹಿಂಡು ರೈತರ ಜಮೀನಿಗೆ ಲಗ್ಗೆ ಇಟ್ಟು ಅಪಾರ ಪ್ರಮಾಣದ ಬೆಳೆ ನಾಶ ಮಾಡಿವೆ. ಮರಿಗಳು ಸೇರಿ 10ಕ್ಕೂ ಹೆಚ್ಚಿರುವ ಕಾಡಾನೆಗಳ ಹಿಂಡು, ಮೆಕ್ಕೆಜೋಳ, ಶುಂಠಿ ತಿಂದು, ತುಳಿದು ಅಪಾರ ಪ್ರಮಾಣ ನಷ್ಟವುಂಟು ಮಾಡಿವೆ.

ಹೊಸನಗರ ಗ್ರಾಮದ ಸಮೀಪವಿರುವ ರೈತರ ಜಮೀನುಗಳಲ್ಲಿ ಗಜಪಡೆ ದಾಂಧಲೆ ಕಂಡು ಗ್ರಾಮಸ್ಥರು ಭಯಭೀತರಾಗಿದ್ದಾರೆ. ಫಸಲಿಗೆ ಬಂದಿದ್ದ ಬೆಳೆ ಕಳೆದುಕೊಂಡ ರೈತರು ಕಂಗಾಲಾಗಿದ್ದಾರೆ. ಈ ಬಗ್ಗೆ ಅರಣ್ಯ ಇಲಾಖೆಗೆ ಮಾಹಿತಿ ನೀಡಿದರೂ, ಯಾರೊಬ್ಬರೂ ಸ್ಥಳಕ್ಕೆ ಬಾರಲಿಲ್ಲ. ಹೊಸ ನಗರ ಸಮೀಪವೇ ಆನೆಗಳು ಓಡಾಡುತ್ತಿವೆ. ಗ್ರಾಮಸ್ಥರೇ ಅಕ್ಕಪಕ್ಕದ ಗ್ರಾಮಗಳಿಗೆ ಕಾಡಾನೆಗಳ ಚಲನವಲನ ಬಗ್ಗೆ ಮಾಹಿತಿ ನೀಡುತ್ತಿದ್ದಾರೆ. ಅರಣ್ಯ ಇಲಾಖೆ ನಿರ್ಲಕ್ಷ್ಯಕ್ಕೆ ಆಕ್ರೋಶ ವ್ಯಕ್ತಪಡಿಸಿರುವ ಗ್ರಾಮಸ್ಥರು, ಆಗಿರುವ ನಷ್ಟಕ್ಕೆ ಪರಿಹಾರ ನೀಡುವಂತೆ ಒತ್ತಾಯಿಸಿದ್ದಾರೆ.

ಜಿಲ್ಲೆಯಲ್ಲಿ ಒಂದಲ್ಲ ಒಂದು ಕಡೆ ನಿರಂತರವಾಗಿ ಕಾಡಾನೆ ಕಾಟ ತಪ್ಪದೇ ಇರುವುದು ಜನರನ್ನು ಹೈರಾಣಾಗಿದ್ದಾರೆ. ಕಷ್ಟಪಟ್ಟು ಬೆಳೆದ ವಿವಿಧ ಬೆಳೆಯನ್ನು ಕಟಾವು ಮಾಡಿ ಇನ್ನೇನು ಮನೆಗೆ ತೆಗೆದುಕೊಂಡು ಹೋಗಬೇಕೆನ್ನುವಷ್ಟರಲ್ಲಿ ಆನೆ ಹಿಂಡು ತಿಂದು ತೇಗುತ್ತಿವೆ. ಆನೆಗಳು ಗುಂಪಾಗಿ

» ನಾಲ್ಕನೇ ಪುಟದಲ್ಲಿ



# ಇಂದು ಸ್ವಚ್ಛತಾ ಹೀ ಸೇವಾ ಪಾಕ್ಷಿಕ ಅಭಿಯಾನ

• ಪ್ರಜೋದಯ ವರದಿ

**ಹಾಸನ :** ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಜನರಲ್ಲಿ ನೈರ್ಮಲ್ಯ ಶುಚಿತ್ವ ಕುರಿತು ಜಾಗೃತಿ ಮೂಡಿಸುವ ಉದ್ದೇಶದೊಂದಿಗೆ ಜಲಶಕ್ತಿ ಮಂತ್ರಾಲಯ ಹಾಗೂ ಕೇಂದ್ರ ನಗರ ವಸತಿ ವ್ಯವಹಾರಗಳ ಸಚಿವಾಲಯವು ಸೆ.17 ರಿಂದ ಅಕ್ಟೋಬರ್ 2 ರವರೆಗೆ ಸ್ವಚ್ಛತಾ ಹೀ ಸೇವಾ ಪಾಕ್ಷಿಕ-2025 ಅಭಿಯಾನವನ್ನು ಹಮ್ಮಿಕೊಂಡಿದೆ.

ಗಾಂಧೀಜಿ ಜಯಂತಿಯಂದು ಅವರಿಗೆ ಗೌರವ ಸಲ್ಲಿಸಲು ಪ್ರತಿ ವರ್ಷ ಅ.2ನ್ನು ಸ್ವಚ್ಛ ಭಾರತ ದಿನವನ್ನಾಗಿ ಆಚರಿಸುತ್ತಿದ್ದು, ಸ್ವಚ್ಛತೆಗಾಗಿ ಸ್ವಯಂ ಪ್ರೇರಣೆ ಮತ್ತು ಸಾಮೂಹಿಕ ಶ್ರಮದಾನ ಚಟುವಟಿಕೆಗಳನ್ನು ಹಮ್ಮಿಕೊಂಡು ಸಮುದಾಯದ ಆಶಯಗಳನ್ನು ಬಲಪಡಿಸಲು ಆಂದೋಲನ ಆಚರಿಸಲಾಗುತ್ತಿದೆ ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ತಿಳಿಸಿದ್ದಾರೆ.

# ಕಲ್ಲು ಗಣಿಗಾರಿಕೆಗೆ ಅವಕಾಶ ನೀಡದಂತೆ ಒತ್ತಾಯ

• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಕಟ್ಟಾಯ ಹೋಬಳಿ ಚಿಕ್ಕಭಾಗನಹಳ್ಳಿ ಗ್ರಾಮದ ಸರ್ವೆ ನಂ.45 ರಲ್ಲಿ ಅಕ್ರಮ ಕಲ್ಲು ಗಣಿಗಾರಿಕೆಗೆ ಅವಕಾಶ ನೀಡದಂತೆ ಒತ್ತಾಯಿಸಿ ಗ್ರಾಮಸ್ಥರು ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಚಿಕ್ಕಭಾಗನಹಳ್ಳಿ ಗ್ರಾಮದ ಹಲವು ರೈತರಿಗೆ ಸ.ನಂ.45 ರಲ್ಲಿ ಜಮೀನು ಮಂಜೂರಾಗಿದ್ದು, ಖಾತೆ, ಪಹಣಿ ಪಡೆದುಕೊಂಡು ಸ್ವಾಧೀನದಲ್ಲಿದ್ದಾರೆ. ಈ ನಡುವೆ ತಾಲ್ಲೂಕಿನ ಯರೇಬೋರೆ ಕಾವಲು ಗ್ರಾಮಕ್ಕೆ ಸೇರಿದ ಸ.ನಂ. 92/2ರಲ್ಲಿ ದಿನೇಶ ಹಾಗು ರಾಧ ಎಂಬುವವರು ಕಲ್ಲು ಪುಡಿ ಮಾಡುವ ಘಟಕ ತೆರೆದಿದ್ದಾರೆ. ಇವರು ಚಿಕ್ಕಭಾಗನಹಳ್ಳಿಯಲ್ಲಿ ಅಕ್ರಮವಾಗಿ ಕಲ್ಲುಗಣಿಗಾರಿಕೆಗೆ ಹವಣಿಸುತ್ತಿದ್ದಾರೆ. ಅದಕ್ಕೆ ಅಧಿಕಾರಿಗಳು ಕೂಡ ಸಹಕಾರ ನೀಡುತ್ತಿದ್ದಾರೆಂದು ಆರೋಪಿಸಿದರು.



ಗಣಿಗಾರಿಕೆ ವೇಳೆ ಡೈನಾಮೆಟ್ ಸಿಡಿಸುವುದರಿಂದ ಶಬ್ದ ಮಾಲಿನ್ಯ ಉಂಟಾಗಿ ಜನ -ಜಾನುವಾರುಗಳಿಗೆ ತೊಂದರೆಯಾಗಲಿದೆ. ಗ್ರಾಮಕ್ಕೆ ಕೇವಲ 700-800 ಮೀಟರ್ ದೂರ ವಿದ್ದು, ಬರುವ ಧೂಳು ವ್ಯವಸಾಯ ಮಾಡಲು ಅಡ್ಡಿಯುಂಟಾಗುವುದಲ್ಲದೆ, ಮೇವಿಗೆ ತೊಂದರೆಯಾಗುತ್ತದೆ. ಆದ್ದರಿಂದ ಗಣಿಗಾರಿಕೆ ಅವಕಾಶ ನೀಡಬಾರದೆಂದು ಆಗ್ರಹಿಸಿದರು.

ಕೆಲ ಅಧಿಕಾರಿಗಳನ್ನು ಗಣಿಗಾರಿಕೆ ನಡೆಸುವವರೊಂದಿಗೆ ಶಾಮೀಲಾಗಿ ಕಲ್ಲುಗಣಿ ಗುತ್ತಿಗೆ ಪಡೆಯಲು ಹೊರಟಿರುವುದನ್ನು ಗ್ರಾಮಸ್ಥರು ವಿರೋಧ ಮಾಡಿದರೂ ಸಹ ಇತ್ತೀಚೆಗೆ ತಹಶೀಲ್ದಾರ್ ಮತ್ತು ಗಣಿ ಭೂವಿಜ್ಞಾನ ಇಲಾಖಾ ಅಧಿಕಾರಿಗಳು ಸೇರಿ ಜಮೀನು ಸುತ್ತಾ ಕಲ್ಲಿಗೆ ಬಣ್ಣ ಬಳಿದು ಗುರುತು ಮಾಡಿದ್ದಾರೆ. ಈ ಬಗ್ಗೆ 2023ರಿಂದ ಅಧಿಕಾರಿಗಳಿಗೆ ತಿಳಿಸುತ್ತಾ ಬಂದರೂ ಪರವಾನಿಗೆ ನೀಡಲು ಮುಂದಾಗಿರುವುದು ಖಂಡನೀಯವೆಂದು ಹೇಳಿದರು.

ಗ್ರಾಮಸ್ಥರಾದ ಮಂಜೇಗೌಡ, ಪ್ರವೀಣ್‌ಗೌಡ, ರಂಗನಾಥ್, ಶಿವು, ನಂದೀಶ್, ಕಾಳೇಗೌಡ, ಹರೀಶ್, ಜಗದೀಶ್, ತಮ್ಮಣ್ಣಗೌಡ, ಆನಂದ ಶೇಖರ್ ಇದ್ದರು.

# ಪಾನಮತ್ತ ಚಾಲಕನ ಹುಚ್ಚಾಟ: ವಾಹನಗಳಿಗೆ ಡಿಕ್ಕಿ



• ಪ್ರಜೋದಯ ವರದಿ

**ಹಾಸನ:** ಮೊಸಳೆಹೊಸಳ್ಳಿಯಲ್ಲಿ ನಡೆದ ಭೀಕರ ದುರಂತ ಮಾಸುವ ಮುನ್ನವೇ ನಗರದಲ್ಲಿ ಅಶೋಕ್ ಲೈಲ್ಯಾಂಡ್ ವಾಹನ ಚಾಲಕ ಹುಚ್ಚಾಟ ಪ್ರದರ್ಶಿಸಿದ್ದಾನೆ.

ಮದ್ಯದ ಅಮಲಿನಲ್ಲಿ ವಾಹನ ಚಲಾಯಿಸಿ ಹಲವು ವಾಹನಗಳಿಗೆ ಡಿಕ್ಕಿ ಹೊಡೆದು ಪರಾರಿಯಾಗಲು ಯತ್ನಿಸಿದ ಘಟನೆ ನಗರದ ಕೆ.ಆರ್.ಪುರಂನಲ್ಲಿ ನಡೆದಿದೆ. ವಾಹನ ಡಿಕ್ಕಿ ಹೊಡೆದಿದ್ದರಿಂದ ಬೈಕ್ ಸವಾರ ಕೂದಲೆಳೆ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಬೈಕ್‌ಗೆ ಡಿಕ್ಕಿ ಹೊಡೆದು ಬೈಕ್ ಸವಾರ ಕೆಳಗೆ ಬಿದ್ದರೂ ವಾಹನ ನಿಲ್ಲಿಸದೆ ಪರಾರಿಯಾಗುವ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ.

ವಾಹನವನ್ನು ಯುವಕರು, ಸುಮಾರು ಹತ್ತು ಕಿ.ಮೀ. ಬೆನ್ನಟ್ಟಿ ರಾಷ್ಟ್ರೀಯ ಹೆದ್ದಾರಿ 75ರ ಗಾಡೇನಹಳ್ಳಿ ಗೇಟ್ ಬಳಿ ಹಿಡಿದು, ಚಾಲಕನಿಗೆ ಧರ್ಮದೇಟು ಕೊಟ್ಟು, ಚಾಲಕ ಸೇರಿ ಮತ್ತಿಬ್ಬರನ್ನು ಶಾಂತಿಗ್ರಾಮ ಪೊಲೀಸರಿಗೆ ಒಪ್ಪಿಸಿದ್ದಾರೆ. ಈ ವೇಳೆ ಮೂವರೂ ಕಂಠಪೂರ್ತಿ ಕುಡಿದು ವಾಹನ ಚಾಲನೆ ಮಾಡುತ್ತಿದ್ದರೆಂದು ಗೊತ್ತಾಗಿದೆ.

## ಕಾಯಕಲ್ಪ ರಥಯಾತ್ರೆಗೆ ಚಾಲನೆ ನೀಡಿ ಶಿವಲಿಂಗೇಗೌಡ ಸಲಹೆ

# ತೆಂಗು ಬೆಳೆಗೆ ರೋಗ: ಸಮಾರೋಪಾದಿ ನಿರ್ಮೂಲನೆ ಮಾಡಿ

• ಪ್ರಜೋದಯ ವರದಿ

**ಅರಸೀಕೆರೆ :** ತೆಂಗು ಬೆಳೆಯಲ್ಲಿ ಕಾಣಿಸಿಕೊಂಡಿರುವ ಬಿಳಿ ನೊಣ, ಕಪ್ಪು ತಲೆ ಹುಳು, ಅಣಬೆ ರೋಗ ಹಾಗು ಕಾಂಡ ಸೋರುವ ರೋಗಗಳು ರೈತರಿಗೆ ಆರ್ಥಿಕ ನಷ್ಟ ಉಂಟು ಮಾಡಿವೆ. ಉಲ್ಬಣಗೊಂಡಿರುವ ರೋಗ ಹಾಗು ಕೀಟಗಳನ್ನು ಅಧಿಕಾರಿಗಳು ಹಾಗು ರೈತರು ಸಮನ್ವಯತೆಯಿಂದ ಒಗ್ಗೂಡಿ ಸಮಾರೋಪಾದಿಯಲ್ಲಿ ನಿರ್ಮೂಲನೆ ಮಾಡಬೇಕೆಂದು ಗೃಹಮಂಡಳಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ ಅವರು ಸಲಹೆ ನೀಡಿದರು.

ತಾಲ್ಲೂಕಿನ ಪ್ರಮುಖ ವಾಣಿಜ್ಯ ಬೆಳೆ ತೆಂಗಿಗೆ ತಗುಲಿರುವ ವಿವಿಧ ರೋಗ, ಕೀಟಬಾಧೆ ತಡೆ ಹಾಗು ಬೇಸಾಯ ಕ್ರಮದ ಬಗ್ಗೆ ರೈತರಿಗೆ ಅರಿವು ಮೂಡಿಸಲು ತೋಟಗಾರಿಕೆ ಇಲಾಖೆ ವತಿಯಿಂದ ಹಮ್ಮಿಕೊಂಡಿರುವ ತೆಂಗು ಕಾಯಕಲ್ಪ ರಥಯಾತ್ರೆಗೆ ಚಾಲನೆ ನೀಡಿ ಮಾತನಾಡಿದ ಅವರು, ತಾಲ್ಲೂಕಿನ ಎಲ್ಲಾ ರೈತರು ಈ ರೋಗಗಳ ಹತೋಟಿಗೆ ಔಷಧಿಗಳನ್ನು ವಿತರಿಸಲು ಬೇಕಾಗುವ ಅನುದಾನದ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಸಮಾರೋಪಾದಿಯಲ್ಲಿ ಕಾರ್ಯನಿರ್ವಹಿಸುವಂತೆ ತಿಳಿಸಿದರು.



ರೈತರಿಗೆ ಎಲ್ಲಾ ರೀತಿಯ ಮಾಹಿತಿ ನೀಡುವ ಉದ್ದೇಶದಿಂದ ಎರಡು ಪ್ರಚಾರ ವಾಹನಗಳು ತಾಲ್ಲೂಕಿನ ಎಲ್ಲಾ ಹಳ್ಳಿಗಳಲ್ಲೂ 15 ದಿನಗಳ ಕಾಲ ಈ ಯಾತ್ರೆ ಸಂಚರಿಸಲಿದೆ. ತೆಂಗಿನಲ್ಲಿ ಬರುವ ಕೀಟ ಮತ್ತು ರೋಗಗಳನ್ನು ಸಮರೋಪಾದಿಯಲ್ಲಿ ಪ್ರತಿ ರೈತರು ಹತೋಟಿಗೆ ತಂದಾಗ ಮಾತ್ರ ತೆಂಗಿನಲ್ಲಿ ಪ್ರಗತಿ ಕಾಣಲು ಸಾಧ್ಯ ಮತ್ತು ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳುವಂತೆ ತಿಳಿಸಿದರು.

ತೋಟಗಾರಿಕೆ ಉಪ ನಿರ್ದೇಶಕ ಯೋಗೇಶ್ ಅವರು ಮಾತನಾಡಿ, ತಾಲ್ಲೂಕಿನಲ್ಲಿ ಚಾಲನೆ ನೀಡಿರುವ ಕಾಯಕಲ್ಪ ಯಾತ್ರೆಯಂತೆ ಜಿಲ್ಲೆಯಾದ್ಯಂತ ಆರು ಪ್ರಚಾರ ವಾಹನಗಳನ್ನು ಆಯಾ ತಾಲ್ಲೂಕಿನ ಶಾಸಕರು ಸಂಸದರ ಉಪಸ್ಥಿತಿಯಲ್ಲಿ ಆಯೋಜಿಸಿ, ಉದ್ಘಾಟಿಸಿ ತೆಂಗು ರೋಗ ಕೀಟ ಹಾಗು ಉತ್ತಮ ತೆಂಗು ಬೇಸಾಯ ಪರಿಸ್ಥಿತಿಗಳ ಬಗ್ಗೆ ಪ್ರಚಾರ ಮಾಡಲು ಹಾಗು ಕಪ್ಪು ತಲೆ ಹುಳ ಬಾಧಿತ ತೋಟಗಳಿಗೆ ಗೊನಿಯೋಜಸ್ ಪರೋಪ ಜೀವಿಯನ್ನು ಹಾಗು ಕಾಂಡ ಸೋರುವ ರೋಗಕ್ಕೆ ಉಪಚರಿಸಲು ಹಾಕ್ಸ ಕೋನೋ ಜೋಲ್ ರೋಗ ನಾಶಗಳನ್ನು ಸಹ ವಿತರಿಸಲು ಕ್ರಮ ವಹಿಸಲಾಗುತ್ತಿದೆ ಎಂದು ತಿಳಿಸಿದರು.

ಇದೇ ವೇಳೆ ತೆಂಗು ಕಾಯಕಲ್ಪ ಆಶಯದೊಂದಿಗೆ ಹಳ್ಳಿಗಳಲ್ಲಿ ವಿತರಿಸಲು ಕರಪತ್ರಗಳನ್ನು ಎಲ್ಲಾ ಗ್ರಾಮ ಪಂಚಾಯಿತಿ ಹಾಗೂ ಹಾಲಿನ ಡೇರಿಗಳ ಮುಂಭಾಗದಲ್ಲಿ ಅಂಟಿಸಲು ಭಿತ್ತಿ ಪತ್ರಗಳನ್ನು ಶಾಸಕರ ಮೂಲಕ ಬಿಡುಗಡೆಗೊಳಿಸಲಾಯಿತು. ಕರ ಪತ್ರ ಹಾಗು ಭಿತ್ತಿ ಪತ್ರಗಳು ತೆಂಗಿನಲ್ಲಿ ಬಾಧಿಸುವ ಕಪ್ಪು ತಲೆ ಹುಳ,ಅಣಬೆ ರೋಗ ಮತ್ತು ಕಾಂಡ ಸೋರುವ ರೋಗಗಳ ಲಕ್ಷಣ ಮತ್ತು ಅದರ ಹತೋಟಿ ಕ್ರಮಗಳು ಹಾಗೂ ಉತ್ತಮ ಬೇಸಾಯ ಕ್ರಮಗಳ ಬಗ್ಗೆ ಮಾಹಿತಿ ಒದಗಿಸಲಾಗಿದೆ.

ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಬಿ.ಎ.ಸೀಮಾ, ತೆಂಗು ಸಂಶೋಧನಾ ಕೇಂದ್ರದ ಮುಖ್ಯಸ್ಥ ಕಾಂತರಾಜು, ವಿಷಯ ತಜ್ಞ ಡಾ. ಜಗದೀಶ್, ಸಹಾಯಕ ನಿರ್ದೇಶಕ ಶಿವಕುಮಾರ್, ಗ್ರಾಮ ಪಂಚಾಯಿತಿ ಅಧ್ಯಕ್ಷರು ಹಾಗು ಸದಸ್ಯರು, ವಿವಿಧ ಹಳ್ಳಿಗಳಿಂದ ಆಗಮಿಸಿದ್ದ 150ಕ್ಕೂ ಹೆಚ್ಚು ರೈತರು ಹಾಜರಿದ್ದರು.

**ಶಾಸಕರ ಸಮ್ಮುಖದಲ್ಲಿ ಪ್ರಾತ್ಯಕ್ಷಿಕೆ**

ತೆಂಗು ಕಾಯಕಲ್ಪ ರಸಾಯಚಯ ಭಾಗವಾಗಿ ಪ್ರಾತ್ಯಕ್ಷಿಕೆಯನ್ನು ಪ್ರತಿ ಗ್ರಾಮ ಪಂಚಾಯಿತಿ ಕೇಂದ್ರಗಳಲ್ಲಿ ಆಯೋಜನೆ ಮಾಡಲು ಉದ್ದೇಶಿಸಿದ್ದು, ಅದರಂತೆ ನಾಗತಿಹಳ್ಳಿ ಗ್ರಾಮದ ನಾಗರಾಜು ಎಂಬ ರೈತರ ತೋಟದಲ್ಲಿ ಕಪ್ಪು ತಲೆ ಹುಳವಿನ ಹತೋಟಿಗಾಗಿ ಪರೋಪ ಜೀವಿಗಳ ಬಿಡುಗಡೆ, ಕಾಂಡ ಸೋರುವ ರೋಗ ಬಾಧೆಗೆ ಹೆಕ್ಸಾ ಕೊನಜೋಲ್ ಔಷಧಿಯನ್ನು ಬೇರಿನ ಮುಖಾಂತರ ಉಪಚಾರ ಮಾಡುವುದು, ಕಾಂಡ ಸೋಲುವ ಭಾಗವನ್ನು ಕಾಪರ್ ಹಾಕ್ಸ ಕೋ ರೈಡ್ ಔಷಧಿಯಿಂದ ಉಪಚರಿಸುವುದು. ರೋಗ ಬೇರೆ ಮರಗಳಿಗೆ ಹರಡದಂತೆ ಟ್ರಾಚ್ ಗಳನ್ನು ನಿರ್ಮಾಣ ಮಾಡುವುದು ಮತ್ತು ಗೊಬ್ಬರಗಳನ್ನು ಯಾವ ರೀತಿ ಮರಗಳಿಗೆ ಹಾಕುವುದು ಎಂಬ ಬಗ್ಗೆ ಪ್ರಾತ್ಯಕ್ಷಿಕೆಯನ್ನು ಶಾಸಕರ ಸಮ್ಮುಖದಲ್ಲಿ ಮಾಡಲಾಯಿತು.

C M Y K C M Y K C M Y K C M Y K

# ಸಾಮಾನ್ಯ ಕಾರ್ಯಕರ್ತನಿಂದ ಸಿಎಂ, ಪ್ರಧಾನಿಯಾಗುವವರೆಗಿನ ನರೇಂದ್ರ ಮೋದಿ ಪ್ರಯಾಣ

- ನಾನು ನರೇಂದ್ರ ದಾಮೋದರ್ ದಾಸ್ ಮೋದಿ ಹೀಗೆ ಹೇಳುತ್ತಾ ಮೇ 26, 2014ರಂದು ನರೇಂದ್ರ ಮೋದಿ ಭಾರತದ 14ನೇ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದರು. ಅವರ ಹೆಸರು ಇಡೀ ಪ್ರಪಂಚದಾದ್ಯಂತ ಪ್ರತಿಧ್ವನಿಸಲು ಪ್ರಾರಂಭಿಸಿತು. ವಿಶ್ವದ ಅತ್ಯಂತ ಪ್ರಸಿದ್ಧ ನಾಯಕರಲ್ಲಿ ಒಬ್ಬರೆಂದು ಪರಿಗಣಿಸಲ್ಪಟ್ಟ ಪ್ರಧಾನಿ ಮೋದಿ ಅವರು ಸೆಪ್ಟೆಂಬರ್ 17, 2025 ರಂದು ತಮ್ಮ 75 ನೇ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳಲಿದ್ದಾರೆ. ಗುಜರಾತ್‌ನ ಸಾಮಾನ್ಯ ಪ್ರಚಾರಕರಿಂದ ಗುಜರಾತ್‌ನ ಮುಖ್ಯಮಂತ್ರಿಯಾಗುವವರೆಗೆ ಮತ್ತು ನಂತರ ದೇಶದ ಪ್ರಧಾನ ಮಂತ್ರಿಯಾಗುವವರೆಗೆ ಪ್ರಧಾನಿ ಮೋದಿಯವರ ಪ್ರಯಾಣವು ಸಾಕಷ್ಟು ಸ್ಫೂರ್ತಿದಾಯಕವಾಗಿದೆ.

ಪ್ರಧಾನಿ ಮೋದಿ 1950 ರ ಸೆಪ್ಟೆಂಬರ್ 17 ರಂದು ಗುಜರಾತ್‌ನ ಸಣ್ಣ ಪಟ್ಟಣವಾದ ವಡ್ನಗರದಲ್ಲಿ ಜನಿಸಿದರು. ಅವರ ಬಾಲ್ಯವು ತೀವ್ರ ಬಡತನದಲ್ಲಿ ಕಳೆದಿತು. ಅವರು ತಮ್ಮ ತಂದೆ ದಾಮೋದರದಾಸ್ ಮುಲ್ಚಂದ್ ಮೋದಿ ಅವರೊಂದಿಗೆ ವಡ್ನಗರ ರೈಲ್ವೆ ನಿಲ್ದಾಣದಲ್ಲಿ ಚಹಾ ಮಾರಾಟ ಮಾಡುತ್ತಿದ್ದರು. ಅವರ ತಾಯಿ ಹೀರಾಬೆನ್ ಒಬ್ಬ ಸಾಮಾನ್ಯ ಗೃಹಿಣಿ. ಪ್ರಧಾನಿ ಮೋದಿ ಅವರ ಹೆತ್ತವರ ನಾಲ್ವರು ಒಡಹುಟ್ಟಿದವರಲ್ಲಿ ಮೂರನೇ ಮಗುವಾಗಿದ್ದರು.

ಪಿಎಂ ಇಂಡಿಯಾ ಪ್ರಕಾರ, ಪ್ರಧಾನಿ ಮೋದಿ ಅವರು ಬಾಲ್ಯದಿಂದಲೂ ಬಹಳ ಮಹತ್ವಾಕಾಂಕ್ಷೆಯುಳ್ಳವರಾಗಿದ್ದರು ಎಂದು ಅವರ ಶಾಲಾ ಸ್ನೇಹಿತರು ಹೇಳುತ್ತಾರೆ. ಅವರಿಗೆ ಪುಸ್ತಕಗಳನ್ನು ಓದುವುದು ತುಂಬಾ ಇಷ್ಟವಾಗಿತ್ತು. ಶಾಲೆಯಲ್ಲಿ ಚರ್ಚಾ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದರು. ಸ್ಥಳೀಯ ಗ್ರಂಥಾಲಯದಲ್ಲಿ ಗಂಟೆಗಟ್ಟಲೆ ಓದುತ್ತಿದ್ದರು. ಅವರಿಗೆ ಬಾಲ್ಯದಿಂದಲೂ ಈಜುವುದೂ ಇಷ್ಟವಾಗಿತ್ತು.

ಭಾರತದಲ್ಲಿ ಮಾತ್ರವಲ್ಲದೆ ವಿಶ್ವದ ಹಲವು ದೇಶಗಳಲ್ಲಿಯೂ ಪ್ರಧಾನ ಮಂತ್ರಿಯವರ ಜನಪ್ರಿಯತೆ ಹೆಚ್ಚಾಗಿದೆ. ಈ ವರ್ಷದ ಜುಲೈ ತಿಂಗಳಲ್ಲಿ ಬಿಡುಗಡೆಯಾದ ಅನುಮೋದನೆ ರೇಟಿಂಗ್‌ಗಳ ಪಟ್ಟಿಯಲ್ಲಿ ಡೆಮಾಕ್ರಟಿಕ್ ನಾಯಕ ಅಗ್ರಸ್ಥಾನದಲ್ಲಿದ್ದಾರೆ. ಕಳೆದ 11 ವರ್ಷಗಳಲ್ಲಿ, ಪ್ರಧಾನಿ ಮೋದಿ ಅನೇಕ ರಾಷ್ಟ್ರೀಯ ಮತ್ತು ಅಂತಾರಾರಾಷ್ಟ್ರೀಯ ವೇದಿಕೆಗಳಲ್ಲಿ ದೇಶವನ್ನು ಧೈರ್ಯದಿಂದ ಮುನ್ನಡೆಸಿದ್ದಾರೆ.



ನರೇಂದ್ರ ಮೋದಿಯವರ ಜೀವನ ಚರಿತ್ರೆಯು ಹೋರಾಟ ಮತ್ತು ಸಮರ್ಪಣೆಯ ಸ್ಫೂರ್ತಿದಾಯಕ ಗಾಥೆಯಾಗಿದೆ. ಅವರು ತಮ್ಮ ಅಸಾಧಾರಣ ನಾಯಕತ್ವ ಮತ್ತು ಶ್ರೇಷ್ಠ ವ್ಯಕ್ತಿತ್ವದಿಂದ ಭಾರತಕ್ಕೆ ಹೊಸ ದಿಕ್ಕನ್ನು ನೀಡಿದ ನಾಯಕ. ಅವರ ನಾಯಕತ್ವದ ಸಾಮರ್ಥ್ಯ, ದೂರದೃಷ್ಟಿ ಮತ್ತು ಸಾರ್ವಜನಿಕ ಬೆಂಬಲ ಅವರನ್ನು ಪ್ರಭಾವಿ ನಾಯಕನನ್ನಾಗಿ ಮಾಡಿದೆ. ಅವರು ತಮ್ಮ ನಿರ್ಧಾರಗಳಿಗೆ ಅಂಟಿಕೊಳ್ಳುವ ಮತ್ತು ತಮ್ಮ ಗುರಿಗಳನ್ನು ಸಾಧಿಸಲು ಶ್ರಮಿಸುವ ಪ್ರಬಲ ನಾಯಕ. ಅವರ ನಾಯಕತ್ವದ ಸಾಮರ್ಥ್ಯವು ಅವರನ್ನು ಭಾರತ ಮತ್ತು ವಿಶ್ವದ ಅತ್ಯಂತ ಪ್ರಭಾವಿ ನಾಯಕರಲ್ಲಿ ಒಬ್ಬರನ್ನಾಗಿ ಮಾಡಿದೆ.

ಪ್ರಧಾನಿ ಭಾರತದ ಭವಿಷ್ಯದ ಬಗ್ಗೆ ಕಾಳಜಿ ವಹಿಸುವ ಒಬ್ಬ ದೂರದೃಷ್ಟಿಯ ನಾಯಕ. ಅವರು ಅನೇಕ ಮಹತ್ವಾಕಾಂಕ್ಷೆಯ ಯೋಜನೆಗಳನ್ನು ಪ್ರಾರಂಭಿಸಿದ್ದಾರೆ. ಇವುಗಳಲ್ಲಿ ಸ್ವಚ್ಛ ಭಾರತ ಅಭಿಯಾನ, ಡಿಜಿಟಲ್ ಇಂಡಿಯಾ ಮತ್ತು ಮೇಕ್ ಇನ್ ಇಂಡಿಯಾ ಇತ್ಯಾದಿಗಳು ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಲು ಸಹಾಯ ಮಾಡುತ್ತಿವೆ.

ಸಾರ್ವಜನಿಕರಿಂದ ವ್ಯಾಪಕ ಬೆಂಬಲ, ಜನಪ್ರಿಯತೆ ಮತ್ತು ಅವರ ವ್ಯಕ್ತಿತ್ವದ ಅದ್ಭುತ ಪ್ರಭಾವವು ಅವರನ್ನು ಕಠಿಣ ನಿರ್ಧಾರಗಳನ್ನು ಸಹ ಸುಲಭವಾಗಿ ಕಾರ್ಯಗತಗೊಳಿಸಲು ಸಮರ್ಥರಾದ ದೃಢನಿಶ್ಚಯದ ನಾಯಕರನ್ನಾಗಿ ಮಾಡಿದೆ. ನರೇಂದ್ರ ಮೋದಿಯವರ ಶ್ರೇಷ್ಠ ವ್ಯಕ್ತಿತ್ವವು ಅವರ ನಾಯಕತ್ವ ಸಾಮರ್ಥ್ಯ, ದೂರದೃಷ್ಟಿ ಮತ್ತು ಸಾರ್ವಜನಿಕ ಬೆಂಬಲದ ಪರಿಣಾಮವಾಗಿದೆ. ಅವರು ತಮ್ಮ ಜೀವನದಲ್ಲಿ ಅನೇಕ ಸವಾಲುಗಳನ್ನು ಎದುರಿಸಿದ್ದಾರೆ ಮತ್ತು ಜಯಿಸಿದ್ದಾರೆ, ಇದು ಅವರ ಬಲವಾದ ಇಚ್ಛಾಶಕ್ತಿ ಮತ್ತು ದೃಢಸಂಕಲ್ಪವನ್ನು ತೋರಿಸುತ್ತದೆ.

ಚಿಕ್ಕ ವಯಸ್ಸಿನಲ್ಲಿಯೇ ಗೃಹಸ್ಥ ಜೀವನವನ್ನು ತೊರೆದು ಸಾಮಾಜಿಕ ಜೀವನಕ್ಕೆ ಕಾಲಿಟ್ಟ ನರೇಂದ್ರ ಮೋದಿ ಅವರು ತಮ್ಮ ಇಡೀ ಜೀವನವನ್ನು ನಿಸ್ವಾರ್ಥ ಸೇವೆಯ ಮನೋಭಾವದಲ್ಲಿ ಕಳೆದಿದ್ದಾರೆ ಮತ್ತು ಇಂದಿಗೂ ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವದ ಉನ್ನತ ಸ್ಥಾನದಲ್ಲಿದ್ದರೂ ಈ ಮನೋಭಾವ ಇನ್ನೂ ಜೀವಂತವಾಗಿದೆ. ಅನೇಕ ದೇಶಗಳು ಮತ್ತು ವಿಶ್ವದ ಉನ್ನತ ನಾಯಕತ್ವವು ಅವರ ಜೀವನದಿಂದ ಮಾರ್ಗದರ್ಶನವನ್ನು ನಿರೀಕ್ಷಿಸುತ್ತದೆ, ಇದು ಅನೇಕ ಅಚ್ಚರಿಯ ಘಟನೆಗಳು, ಬಿರುಗಾಳಿಗಳು ಮತ್ತು ಏರಿಳಿತಗಳಿಂದ ತುಂಬಿದೆ.

**- ನಯನಾ** ರಾಜೀವ್

# ಆರಂಭದಿಂದಲೇ ರೋಗಿಯ ಸುರಕ್ಷತೆ!

## ಸೆಪ್ಟೆಂಬರ್ 17 2025 ರ ವಿಶ್ವ ರೋಗಿ ಸುರಕ್ಷತಾ ದಿನ

ವಿಶ್ವ ರೋಗಿ ಸುರಕ್ಷತಾ ದಿನವನ್ನು ಸೆಪ್ಟೆಂಬರ್ 17, 2025 ರಂದು ಆಚರಿಸಲಾಗುತ್ತದೆ. 2025 ರ ಆಚರಣೆಯ ಥೀಮ್ ಪ್ರತಿ ನವಜಾತ ಶಿಶುವಿಗೆ ಮತ್ತು ಪ್ರತಿ ಮಗುವಿಗೆ ಸುರಕ್ಷಿತ ಆರೈಕೆ! ಎಂಬುದಾಗಿದೆ. ಈ ದಿನವು ರೋಗಿಯ ಸುರಕ್ಷತೆಯ ಮಹತ್ವದ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಆರೋಗ್ಯ ಸೇವೆಗಳಲ್ಲಿ ಅಪಾಯಗಳನ್ನು ತಡೆಯಲು, ವಿಶೇಷವಾಗಿ ಹೊಸದಾಗಿ ಜನಿಸಿದ ಮತ್ತು ಮಕ್ಕಳ ಆರೈಕೆಯಲ್ಲಿ ಸುರಕ್ಷತೆಯನ್ನು ಖಾತ್ರಿಪಡಿಸುವ ಉದ್ದೇಶವನ್ನು ಹೊಂದಿದೆ.

ರೋಗನಿರ್ಣಯವು ರೋಗಿಯ ಆರೋಗ್ಯ ಸಮಸ್ಯೆಯನ್ನು ಗುರುತಿಸುತ್ತದೆ. ರೋಗನಿರ್ಣಯವನ್ನು ತಲುಪಲು, ರೋಗಿಗಳು ಮತ್ತು ಅವರ ಆರೋಗ್ಯ ರಕ್ಷಣಾ ತಂಡಗಳು ಸಂಕೀರ್ಣ ಮತ್ತು ಕೆಲವೊಮ್ಮೆ ದೀರ್ಘವಾದ ರೋಗನಿರ್ಣಯ ಪ್ರಕ್ರಿಯೆಯನ್ನು ನ್ಯಾವಿಗೇಟ್ ಮಾಡಲು ಒಟ್ಟಾಗಿ ಕೆಲಸ ಮಾಡಬೇಕು. ಇದು ಅಂತಿಮ ರೋಗನಿರ್ಣಯ ಮತ್ತು ಚಿಕಿತ್ಸೆಯನ್ನು ತಲುಪುವ ಮೊದಲು ರೋಗಿಯೊಂದಿಗೆ ಚರ್ಚೆ, ಪರೀಕ್ಷೆ, ಪರೀಕ್ಷೆ ಮತ್ತು ಫಲಿತಾಂಶಗಳ ವಿಮರ್ಶೆಯನ್ನು ಒಳಗೊಂಡಿರುತ್ತದೆ. ಯಾವುದೇ ಹಂತದಲ್ಲಿ ದೋಷಗಳು ಸಂಭವಿಸಬಹುದು ಮತ್ತು ಗಮನಾರ್ಹ ಪರಿಣಾಮಗಳನ್ನು ಉಂಟುಮಾಡಬಹುದು. ವಿಳಂಬವಾದ, ತಪ್ಪಾದ ಅಥವಾ ತಪ್ಪಿದ ರೋಗನಿರ್ಣಯವು ಅನಾರೋಗ್ಯವನ್ನು ದೀರ್ಘಕಾಲದವರೆಗೆ ಮಾಡಬಹುದು ಮತ್ತು ಕೆಲವೊಮ್ಮೆ ಅಂಗವೈಕಲ್ಯ ಅಥವಾ ಸಾವಿಗೆ ಕಾರಣವಾಗಬಹುದು.

**ಆರಂಭದಿಂದಲೇ ರೋಗಿಯ ಸುರಕ್ಷತೆ!**

ವಿಶ್ವ ರೋಗಿಗಳ ಸುರಕ್ಷತಾ ದಿನವು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು, ಪಾಲುದಾರರ ನಡುವೆ ಸಹಯೋಗವನ್ನು ಬೆಳೆಸಲು ಮತ್ತು ರೋಗಿಗಳ ಸುರಕ್ಷತೆಯನ್ನು ಸುಧಾರಿಸಲು ಜಾಗತಿಕ ಕ್ರಮವನ್ನು ಸಜ್ಜುಗೊಳಿಸಲು ಒಂದು ಅವಕಾಶವಾಗಿದೆ.



ಈ ವರ್ಷದ ಧ್ಯೇಯವಾಕ್ಯ ಪ್ರತಿಯೊಂದು ನವಜಾತ ಶಿಶು ಮತ್ತು ಪ್ರತಿ ಮಗುವಿಗೆ ಸುರಕ್ಷಿತ ಆರೈಕೆ, ಪ್ರಾರಂಭದಿಂದಲೇ ರೋಗಿಯ ಸುರಕ್ಷತೆ! ಎಂಬ ಘೋಷಣೆಯೊಂದಿಗೆ, ಅಸುರಕ್ಷಿತ ಆರೈಕೆಯಿಂದ ಉಂಟಾಗುವ ಅಪಾಯಗಳು ಮತ್ತು ಹಾನಿಗಳಿಗೆ ಈ ವಯಸ್ಸಿನ ಗುಂಪಿನವರ ದುರ್ಬಲತೆಯನ್ನು ಗುರುತಿಸುತ್ತದೆ.



ಸುರಕ್ಷಿತ ಹೆರಿಗೆ, ರೋಗಿಗಳ ಸುರಕ್ಷತೆಗೆ ಆದ್ಯತೆ ನೀಡುವುದು, ಆರೋಗ್ಯ ಕಾರ್ಯಕರ್ತರ ಸುರಕ್ಷತೆ, ಔಷಧಿ ಸುರಕ್ಷತೆ, ರೋಗಿ ಮತ್ತು ಕುಟುಂಬದ ತೊಡಗಿಸಿಕೊಳ್ಳುವಿಕೆ ಮತ್ತು ರೋಗನಿರ್ಣಯದ ಸುರಕ್ಷತೆ ಕುರಿತ ಹಿಂದಿನ ಅಭಿಯಾನಗಳ ಪ್ರಯತ್ನಗಳನ್ನು ಆಧರಿಸಿ, ಮಕ್ಕಳ ಮತ್ತು ನವಜಾತ ಶಿಶುಗಳ ಆರೈಕೆಯಲ್ಲಿ ತಪ್ಪಿಸಬಹುದಾದ ಹಾನಿಯನ್ನು ತೆಗೆದುಹಾಕಲು ತುರ್ತು ಕ್ರಮ ಕೈಗೊಳ್ಳಬೇಕೆಂದು ಡಬ್ಲ್ಯೂಹೆಚ್‌ಓ ಕರೆ ನೀಡುತ್ತದೆ. 2025 ರ ವಿಶ್ವ ರೋಗಿಯ ಸುರಕ್ಷತಾ ದಿನವು ಅರ್ಥಪೂರ್ಣ ಸುಧಾರಣೆಗಳನ್ನು ಹೆಚ್ಚಿಸುವ ಮತ್ತು ಪ್ರತಿ ಮಗುವಿನ ಸುರಕ್ಷಿತ ಮತ್ತು ಗುಣಮಟ್ಟದ ಆರೈಕೆಯ ಹಕ್ಕನ್ನು ಪುನರುಚ್ಚರಿಸುವ ಗುರಿಯನ್ನು ಹೊಂದಿದೆ.

**ವಿಶ್ವ ರೋಗಿಯ ಸುರಕ್ಷತಾ ದಿನ 2025 ರ ಉದ್ದೇಶಗಳು**

1. ಮಕ್ಕಳು, ಕುಟುಂಬಗಳು ಮತ್ತು ಆರೈಕೆದಾರರ ನಿರ್ದಿಷ್ಟ ಅಗತ್ಯಗಳನ್ನು ಒತ್ತಿಹೇಳುತ್ತಾ, ಎಲ್ಲಾ ಆರೋಗ್ಯ ರಕ್ಷಣಾ ವ್ಯವಸ್ಥೆಗಳಲ್ಲಿ ಮಕ್ಕಳ ಮತ್ತು ನವಜಾತ ಶಿಶುಗಳ ಆರೈಕೆಯಲ್ಲಿ ಸುರಕ್ಷತಾ ಅಪಾಯಗಳ ಬಗ್ಗೆ ಜಾಗತಿಕ ಜಾಗೃತಿ ಮೂಡಿಸುವುದು.
2. ವಿಶಾಲವಾದ ರೋಗಿಗಳ ಸುರಕ್ಷತೆ ಮತ್ತು ಗುಣಮಟ್ಟದ ಉಪಕ್ರಮಗಳ ಭಾಗವಾಗಿ, ನವಜಾತ ಶಿಶುಗಳು ಮತ್ತು ಮಕ್ಕಳಿಗೆ ಸುರಕ್ಷಿತ ಆರೈಕೆಗಾಗಿ ಸುಸ್ಥಿರ ಕಾರ್ಯತಂತ್ರಗಳನ್ನು ಜಾರಿಗೆ ತರಲು ಸರ್ಕಾರಗಳು, ಆರೋಗ್ಯ ರಕ್ಷಣಾ ಸಂಸ್ಥೆಗಳು, ವೃತ್ತಿಪರ ಸಂಸ್ಥೆಗಳು ಮತ್ತು ನಾಗರಿಕ ಸಮಾಜವನ್ನು ಸಜ್ಜುಗೊಳಿಸಿ.
3. ಪೋಷಕರು, ಆರೈಕೆದಾರರು ಮತ್ತು ಮಕ್ಕಳನ್ನು ರೋಗಿಗಳ ಸುರಕ್ಷತೆಯಲ್ಲಿ ಸಬಲೀಕರಣಗೊಳಿಸುವುದು, ಶಿಕ್ಷಣ, ಜಾಗೃತಿ ಮತ್ತು ಆರೈಕೆಯಲ್ಲಿ ಸಕ್ರಿಯ ಭಾಗವಹಿಸುವಿಕೆಯನ್ನು ಉತ್ತೇಜಿಸುವುದು.
4. ಮಕ್ಕಳ ಮತ್ತು ನವಜಾತ ಶಿಶುಗಳ ಆರೈಕೆಯಲ್ಲಿ ರೋಗಿಗಳ ಸುರಕ್ಷತೆಯ ಕುರಿತು ಸಂಶೋಧನೆಯನ್ನು ಬಲಪಡಿಸುವ ಪ್ರತಿಪಾದಕರು.

**ಆರೋಗ್ಯ ರಕ್ಷಣೆಯನ್ನು ಸುರಕ್ಷಿತವಾಗಿಸಲು ಒಟ್ಟಾಗಿ ಕೆಲಸ ಮಾಡುವುದು**

2025 ರ ವಿಶ್ವ ರೋಗಿಗಳ ಸುರಕ್ಷತಾ ದಿನವು ಸೆಪ್ಟೆಂಬರ್ 17 ಮತ್ತು ಅದರ ಆಸುಪಾಸಿನಲ್ಲಿ ರಾಷ್ಟ್ರೀಯ ಅಭಿಯಾನಗಳು, ವಕಾಲತ್ತು ಕಾರ್ಯಕ್ರಮಗಳು, ತಾಂತ್ರಿಕ ಚಟುವಟಿಕೆಗಳು ಮತ್ತು ಅಭಿಯಾನದ ಪ್ರಸಿದ್ಧ ಸಹಿ ಗುರುತು ಕಿತ್ತಳೆ ಬಣ್ಣದಲ್ಲಿ ಸಾಂಪ್ರದಾಯಿಕ ಹೆಗ್ಗುರುತುಗಳು ಮತ್ತು ಸಾರ್ವಜನಿಕ ಸ್ಥಳಗಳನ್ನು ಬೆಳಗಿಸುವುದು ಸೇರಿದಂತೆ ಹಲವಾರು ಚಟುವಟಿಕೆಗಳನ್ನು ಒಳಗೊಂಡಿರುತ್ತದೆ.

## ಥೀಮ್‌ನ ವಿವರಣೆ:

- ಪ್ರತಿ ನವಜಾತ ಶಿಶುವಿಗೆ ಮತ್ತು ಪ್ರತಿ ಮಗುವಿಗೆ ಸುರಕ್ಷಿತ ಆರೈಕೆ!: ಎಂಬ ಥೀಮ್ ಆರೋಗ್ಯ ಕ್ಷೇತ್ರದಲ್ಲಿನ ಒಂದು ನಿರ್ದಿಷ್ಟ ಗುಂಪಿನ ಮೇಲೆ ಕೇಂದ್ರೀಕರಿಸುತ್ತದೆ.
- ಇದು ನವಜಾತ ಶಿಶುಗಳು ಮತ್ತು ಮಕ್ಕಳನ್ನು ಸೂಕ್ಷ್ಮವಾಗಿ ಪರಿಗಣಿಸುತ್ತದೆ, ಏಕೆಂದರೆ ಈ ವಯಸ್ಸಿನ ಗುಂಪು ಗಾಯಗಳು ಮತ್ತು ಹಾನಿಗೆ ಹೆಚ್ಚು ಒಳಗಾಗುತ್ತದೆ.
- ಆರಂಭದಿಂದಲೂ ಸುರಕ್ಷಿತವಾದ ಆರೋಗ್ಯಕರ ವಾತಾವರಣವನ್ನು ಖಾತ್ರಿಪಡಿಸುವುದು ಈ ಥೀಮ್‌ನ ಗುರಿಯಾಗಿದೆ.

## ಮಹತ್ವ:

- ಜಾಗತಿಕ ಜಾಗೃತಿ: ವಿಶ್ವ ರೋಗಿ ಸುರಕ್ಷತಾ ದಿನವು ರೋಗಿಗಳಿಗೆ ಹಾನಿ ಉಂಟುಮಾಡುವ ವೈದ್ಯಕೀಯ ದೋಷಗಳ ಕುರಿತು ಜಾಗೃತಿ ಮೂಡಿಸುತ್ತದೆ.
- ರೋಗಿಯ-ಕೇಂದ್ರಿತ ಆರೈಕೆ: ಇದು ರೋಗಿಯ ಸುರಕ್ಷತಾ ಕ್ರಮಗಳನ್ನು ಸುಧಾರಿಸಲು ಮತ್ತು ರೋಗಿ-ಕೇಂದ್ರಿತ ಆರೈಕೆಯನ್ನು ಉತ್ತೇಜಿಸಲು ಒತ್ತಿಹೇಳುತ್ತದೆ.
- ಆರೋಗ್ಯ ರಕ್ಷಣೆಯಲ್ಲಿ ಸುಧಾರಣೆ: ವೈದ್ಯಕೀಯ ದೋಷಗಳನ್ನು ಕಡಿಮೆ ಮಾಡಲು ಮತ್ತು ರೋಗಿಯ ಸುರಕ್ಷತೆಯನ್ನು ಹೆಚ್ಚಿಸಲು ಆರೋಗ್ಯ ನೀತಿಗಳು ಮತ್ತು ಕಾರ್ಯವಿಧಾನಗಳನ್ನು ಸುಧಾರಿಸುವ ಗುರಿಯನ್ನು ಹೊಂದಿದೆ.



## 17-9-2025 ದಿನ ಭವಿಷ್ಯ



**ಮೇಷ:** ಫಿಟ್ ನೆಸ್ ಮತ್ತು ತೂಕ ನಷ್ಟ ಕಾರ್ಯಕ್ರಮಗಳು ನೀವು ಒಳ್ಳೆಯ ದೇಹರಚನೆ ಹೊಂದಲು ಸಹಾಯ ಮಾಡುತ್ತದೆ. ಇಂದು ನೀವು ನಿಮ್ಮ ಹಣವನ್ನು ಖರ್ಚು ಮಾಡುವ ಅಗತ್ಯವಿಲ್ಲ, ಏಕೆಂದರೆ ಮನೆಯ ಯಾವುದೇ ಹಿರಿಯ ಸದಸ್ಯ ಇಂದು ನಿಮಗೆ ಹಣವನ್ನು ನೀಡಬಹುದು. ಕುಟುಂಬದ ಸದಸ್ಯರ ಖುಷಿಯ ಸ್ವಭಾವ ಮನೆಯಲ್ಲಿನ ವಾತಾವರಣವನ್ನು ಹಗುರಗೊಳಿಸುತ್ತದೆ.



**ವೃಷಭ:** ನಿಮ್ಮ ನೀಡುವ ವರ್ತನೆ ಪರೋಕ್ಷವಾಗಿ ನಿಮಗೆ ಆಶೀರ್ವಾದವೇ ಆಗುತ್ತದೆ, ಏಕೆಂದರೆ ನೀವು ಅನುಮಾನ, ನಿರಾಸೆ, ವಿಶ್ವಾಸರಾಹಿತ್ಯ ಅಹಂಭಾವ ಮತ್ತು ಅಸೂಯೆಯಂಥ ಅನೇಕ ದುರ್ಗುಣಗಳಿಂದ ಮುಕ್ತಿ ಹೊಂದುವ ಸಾಧ್ಯತೆಗಳಿವೆ. ನಿಮ್ಮ ಖರ್ಚುಗಳಲ್ಲಿ ಅನಿರೀಕ್ಷಿತ ಏರಿಕೆ ನಿಮ್ಮ ಮನಸ್ಸಿನ ಶಾಂತಿಗೆ ಭಂಗ ತರುತ್ತದೆ.



**ಮಿಥುನ:** ಒಬ್ಬ ಆಧ್ಯಾತ್ಮಿಕ ವ್ಯಕ್ತಿ ಆಶೀರ್ವಾದ ಮಾಡುತ್ತಾರೆ ಮತ್ತು ಮನಸ್ಸಿನ ಶಾಂತಿ ತರುತ್ತಾರೆ. ಸಣ್ಣ ಉದ್ಯೋಗವನ್ನು ಮಾಡುವ ಜನರು, ಇಂದು ತಮ್ಮ ಆಪ್ತರಿಂದ ಯಾವುದೇ ಸಲಹೆ ಯನ್ನು ಪಡೆಯಬಹುದು. ಇದರಿಂದ ಅವರಿಗೆ ಆರ್ಥಿಕವಾಗಿ ಲಾಭ ಪಡೆಯುವ ಸಾಧ್ಯತೆ ಇದೆ. ನಿಮ್ಮ ಮಗುವಿನ ಒಂದು ಪ್ರಶಸ್ತಿ ಪ್ರದಾನ ಕಾರ್ಯಕ್ರಮಕ್ಕೆ ಆಮಂತ್ರಣ ಸಂತೋಷದ ಮೂಲವಾಗಬಹುದು.



**ಕರ್ಕಾಟಕ:** ಸ್ವಯಂ ಸುಧಾರಣೆಯ ಯೋಜನೆಗಳು ಒಂದಕ್ಕಿಂತ ಹೆಚ್ಚು ರೀತಿಯಲ್ಲಿ ಫಲ ನೀಡುತ್ತವೆ - ನಿಮ್ಮ ಬಗ್ಗೆ ನಿಮಗೇ ಒಳ್ಳೆಯದೆನಿಸುತ್ತದೆ ಮತ್ತು ವಿಶ್ವಾಸ ಮೂಡುತ್ತದೆ. ನೀವು ಸ್ವಲ್ಪ ಹೆಚ್ಚುವರಿ ಹಣ ಮಾಡಲು ಯೋಜಿಸುತ್ತದ್ದಲ್ಲಿ ಸುಭದ್ರ ಆರ್ಥಿಕ ಯೋಜನೆಗಳಲ್ಲಿ ಹೂಡಿಕೆ ಮಾಡಿ. ಮನೆಯ ಸದಸ್ಯರೊಬ್ಬರ ವರ್ತನೆಯಿಂದ ನೀವು ತೊಂದರೆಗೊಳಗಾಗಬಹುದು.



**ಸಿಂಹ:** ಕ್ರೀಡೆಗಳು ಸಾರ್ವಕಾಲಿಕ ಯೌವ್ವನದ ರಹಸ್ಯವಾಗಿದ್ದರಿಂದ ಯಾವುದಾದರೂ ಆಟಗಳಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ. ಇಂದು ನೀವು ನಿಮ್ಮ ಹಣವನ್ನು ಧಾರ್ಮಿಕ ಚಟುವಟಿಕೆಗಳಲ್ಲಿ ಹೂಡಿಕೆ ಮಾಡಬಹುದು, ಇದರಿಂದ ನೀವು ಮಾನಸಿಕ ಶಾಂತಿಯನ್ನು ಪಡೆಯುವ ಸಂಪೂರ್ಣ ಸಾಧ್ಯತೆ ಇದೆ. ಹಳೆಯ ಸಂಪರ್ಕಗಳು ಮತ್ತು ಸಂಬಂಧಗಳ ಪುನಶ್ಚೇತನಕ್ಕೆ ಒಳ್ಳೆಯ ದಿನ.



ಕನ್ಯಾ: ಕಣ್ಣಿನ ಪೊರೆ ರೋಗಿಗಳಿಗೆ ಧೂಮಪಾನವು ಅವರ ಕಣ್ಣುಗಳಿಗೆ ಮತ್ತಷ್ಟು ಹಾನಿಯುಂಟುಮಾಡಬಹುದಾದ್ದರಿಂದ ಅವರು ಕಲುಷಿತ ಪರಿಸರದಲ್ಲಿ ಹೋಗಬಾರದು. ಸಾಧ್ಯವಾದರೆ ಸೂರ್ಯನ ಬೆಳಕಿಗೆ ಅತಿಯಾದ ಒಡ್ಡಿಕೊಳ್ಳುವಿಕೆಯನ್ನು ತಪ್ಪಿಸಿ. ನೀವು ಪ್ರಯಾಣ ಮಾಡುವ ಮತ್ತು ಹಣ ಖರ್ಚು ಮಾಡುವ ಮನಸ್ಥಿತಿಯಲ್ಲಿರುತ್ತೀರಿ.



ತುಲಾ: ನೀವು ಬಹಳ ವಿಚಿತ್ರವಾದ ಪರಿಸ್ಥಿತಿಯಲ್ಲಿ ಸಿಲುಕಿದರೂ ಅದನ್ನು ಎದುರಿಸಲು ನಿಮ್ಮ ಇಚ್ಛಾಶಕ್ತಿ ಇಂದು ಸಹಾಯ ಮಾಡಬಹುದು. ಒಂದು ಅತ್ಯಂತ ಭಾವನಾತ್ಮಕ ನಿರ್ಧಾರ ಕೈಗೊಳ್ಳುವಾಗ ನೀವು ಸ್ತಿಮಿತ ಕಳೆದುಕೊಳ್ಳಬಾರದು. ದುರ್ಬಲ ಆರ್ಥಿಕ ಸ್ಥಿತಿಯಿಂದ ಕೆಲವು ಪ್ರಮುಖ ಕೆಲಸಗಳು ಸ್ಥಗಿತಗೊಳ್ಳುತ್ತವೆ.



**ವೃಶ್ಚಿಕ:** ತಂದೆಯು ನಿಮ್ಮನ್ನು ಆಸ್ತಿಯ ಉತ್ತರಾಧಿಕಾರಿತ್ವದಿಂದ ತಪ್ಪಿಸಬಹುದು. ಆದರೆ ಧೃತಿಗೆಡಬೇಡಿ. ಅಭ್ಯುದಯ ಮನಸ್ಸಿಗೆ ಮುದ ನೀಡಿದರೆ ಅಭಾವ ಅದನ್ನು ಬಲಗೊಳಿಸುತ್ತದೆಂದು ನೆನಪಿಡಿ. ಜೀವನದ ವಾಹನವನ್ನು ಚೆನ್ನಾಗಿ ಚಲಾಯಿಸಲು ಬಯಸುತ್ತಿದ್ದರೆ, ಇಂದು ನೀವು ಹಣದ ಬಗ್ಗೆ ವಿಶೇಷ ಗಮನ ಹರಿಸಬೇಕು. ಹಳೆಯ ಸಂಪರ್ಕಗಳು ಮತ್ತು ಸಂಬಂಧಗಳ ಪುನಶ್ಚೇತನಕ್ಕೆ ಒಳ್ಳೆಯ ದಿನ.



**ಧನು:** ನಿಮ್ಮ ವಿಶ್ವಾಸ ಮತ್ತು ಚೈತನ್ಯ ಇಂದು ಅಧಿಕವಾಗಿರುತ್ತದೆ. ಇಂದು ನೀವು ಒಳ್ಳೆಯ ಹಣ ಮಾಡುತ್ತೀರಿ - ಆದರೆ ವೆಚ್ಚಗಳಲ್ಲಿ ನಿಮಗೆ ಉಳಿಸಲು ಕಷ್ಟವಾಗಿಸುತ್ತದೆ. ನೀವು ಬಯಸುವ ಎಲ್ಲಾ ಗಮನವನ್ನೂ ನೀವು ಪಡೆಯುವ ಒಳ್ಳೆಯ ದಿನ ನಿಮ್ಮ ಮನಸ್ಸಿನಲ್ಲಿ ಅನೇಕ ವಿಷಯಗಳಿರುತ್ತವೆ ಹಾಗೂ ನೀವು ಯಾವುದನ್ನು ಅನುಸರಿಸಬೇಕೆನ್ನುವ ಸಮಸ್ಯೆ ಹೊಂದಿರುತ್ತೀರಿ.



**ಮಕರ:** ಸಂತಸದ ಪ್ರಯಾಣ ಮತ್ತು ಸಾಮಾಜಿಕ ಕಾರ್ಯಕ್ರಮಗಳು ನಿಮಗೆ ಆರಾಮ ಮತ್ತು ಸಂತೋಷ ತರುತ್ತದೆ. ಸಮಯ ಮತ್ತು ಹಣದ ಕಾತರ ನೀವು ಮಾಡಬೇಕು ಇಲ್ಲದಿದ್ದರೆ ಮುಂಬರುವ ಸಮಯ ತೊಂದರೆಗಳಿಂದ ತುಂಬಿರಬಹುದು ನಿಮ್ಮ ಸಂಗಾತಿ ಬೆಂಬಲ ನೀಡುತ್ತಾರೆ ಹಾಗೂ ಸಹಾಯ ಮಾಡುತ್ತಾರೆ. ಇಂದು, ನೀವು ನಿಮ್ಮ ಪ್ರಿಯತಮೆ ನಿಮ್ಮನ್ನು ಎಷ್ಟು ಪ್ರೀತಿಸುತ್ತಾರೆಂದು ತಿಳಿದುಕೊಳ್ಳುತ್ತೀರಿ.



**ಕುಂಭ:** ಕೆಲವು ಮಾನಸಿಕ ಒತ್ತಡಗಳ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದೆ. ತಮ್ಮ ಆಪ್ತರು ಅಥವಾ ಸಂಬಂಧಿಕರೊಂದಿಗೆ ಸೇರಿ ವ್ಯಾಪಾರವನ್ನು ಮಾಡುತ್ತಿರುವ ಜನರು ಇಂದು ತುಂಬಾ ಯೋಚಿಸಿ ಅರ್ಥಮಾಡಿಕೊಂಡು ಹೆಜ್ಜೆಯನ್ನು ಹಾಕುವ ಅಗತ್ಯವಿದೆ, ಇಲ್ಲದಿದ್ದರೆ ಆರ್ಥಿಕ ನಷ್ಟವಾಗಬಹುದು ನಿಮ್ಮ ಕುಟುಂಬಕ್ಕೆ ಸೂಕ್ತ ಸಮಯ ನೀಡಿ.



**ಮೀನ:** ಸ್ನೇಹಿತರು ನಿಮ್ಮ ಆಲೋಚನೆಗಳ ಮೇಲೆ ಗಮನಾರ್ಹ ಪ್ರಭಾವ ಬೀರಬಹುದಾದ ಯಾರಾದರೂಬ್ಬರನ್ನು ನಿಮಗೆ ಪರಿಚಯಿಸುತ್ತಾರೆ. ನೀವು ಸಂಪ್ರದಾಯಬದ್ಧ ಹೂಡಿಕೆಗಳನ್ನು ಮಾಡಿದಲ್ಲಿ ಒಳ್ಳೆಯ ಹಣ ಮಾಡುತ್ತೀರಿ. ಕುಟುಂಬದ ಸದಸ್ಯರು ಅಥವಾ ಸಂಗಾತಿ ಕೆಲವು ಆತಂಕಗಳನ್ನು ಉಂಟುಮಾಡುತ್ತಾರೆ. ಕೆಲವರಿಗೆ ಸುಂದರ ಉಡುಗೊರೆಗಳು ಮತ್ತು ಹೂಗಳಿಂದ ತುಂಬಿದ ಪ್ರಣಯದ ಸಂಜೆ.

# ಸಾಲ ಮಾಡಿಯಾದ್ರೂ ತುಪ್ಪ ತಿನ್ನಿ!



ಹೌದು, ಇದು ಬಹಳಷ್ಟು ಪ್ರಚಲಿತದಲ್ಲಿರೋ ಮಾತು. ಇದರ ಅರ್ಥ ಏನೆಂದರೆ ಆರೋಗ್ಯದ ವಿಷಯದಲ್ಲಿ ಚೌಕಾಶಿ ಬೇಡ. ತುಪ್ಪ ಒಂದು ಅತ್ಯುತ್ತಮ ಆರೋಗ್ಯದಾಯಕ ಆಹಾರ. ತುಪ್ಪ ತಿನ್ನುವುದರಿಂದ ಬೊಜ್ಜು ಬರುತ್ತೆ, ದೇಹದ ತೂಕ ಹೆಚ್ಚಾಗುತ್ತದೆ ಎನ್ನುವ ಸುಳ್ಳು ಕಾರಣಗಳನ್ನು ನೀಡುತ್ತಾರೆ. ನಿಯಮಿತವಾಗಿ ತುಪ್ಪ ಸೇವನೆ ನೆನಪಿರಲಿ ಶುದ್ಧ ತುಪ್ಪ ಸೇವನೆಯಿಂದ ಬಹಳಷ್ಟು ಆರೋಗ್ಯದಾಯಕ ಬೆಳವಣಿಗೆಗಳನ್ನು ನಾವು ಕಾಣಬಹುದು.

ತುಪ್ಪವು ಬಹುತೇಕ ಎಲ್ಲರ ಮನೆಯಲ್ಲಿ ಬಳಸುವ ಆಹಾರ ಪದಾರ್ಥವಾಗಿದೆ. ಶುದ್ಧ ದೇಸಿ ತುಪ್ಪವು ಆರೋಗ್ಯಕ್ಕೆ ತುಂಬಾ ಪ್ರಯೋಜನಕಾರಿ ಎಂದು ಪರಿಗಣಿಸಲಾಗುತ್ತದೆ. ಅದಕ್ಕಾಗಿಯೇ ಎಲ್ಲರೂ ಅಡುಗೆಯಲ್ಲಿ ತುಪ್ಪವನ್ನು ಬಳಸುತ್ತಾರೆ. ತುಪ್ಪವು ಈ ಎಲ್ಲದರ ರುಚಿಯನ್ನು ಹೆಚ್ಚಿಸುತ್ತದೆ. ಅದರಲ್ಲಿರುವ ಪೋಷಕಾಂಶಗಳು ಆರೋಗ್ಯಕ್ಕೆ ತುಂಬಾ ಪ್ರಯೋಜನಕಾರಿ. ಇ. ತುಪ್ಪವನ್ನು ಆಹಾರದೊಂದಿಗೆ ಮಾತ್ರವಲ್ಲದೆ ಖಾಲಿ ಈ ಹೊಟ್ಟೆಯಲ್ಲಿಯೂ ತಿನ್ನಬಹುದು. ತುಪ್ಪವನ್ನು ಖಾಲಿ ಹೊಟ್ಟೆಯಲ್ಲಿ ತಿಂದರೆ ಅದು ನಿಮಗೆ ಹೆಚ್ಚು ಈ ಪ್ರಯೋಜನಕಾರಿಯಾಗಬಹುದು. ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಈ ಒಂದು ಚಮಚ ತುಪ್ಪ ತಿನ್ನುವುದರಿಂದ ಆರೋಗ್ಯಕ್ಕಾಗುವ ಪ್ರಯೋಜನಗಳನ್ನು ತಿಳಿಯೋಣ.

**ತೂಕ ಇಳಿಸುವಲ್ಲಿ ಸಹಾಯಕ:-** ನೀವು ತುಪ್ಪವನ್ನು ಸೇವಿಸುವುದರಿಂದ ಅದು ನಿಮ್ಮ ತೂಕವನ್ನು ಹೆಚ್ಚಿಸುತ್ತದೆ ಎಂದು ಭಾವಿಸಿದ್ದರೆ, ಅದು ತಪ್ಪು, ತುಪ್ಪವು ದೇಹದ ಕೊಬ್ಬನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ತುಪ್ಪದಲ್ಲಿ ಬ್ಯುಟರಿಕ್ ಆಮ್ಲ ಕಂಡುಬರುತ್ತದೆ. ಇದು ಕೊಬ್ಬನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ತೂಕ ಇಳಿಸುವಾಗ ನೀವು ಹೆಚ್ಚು ತುಪ್ಪವನ್ನು ತಿನ್ನಬಾರದು ಎಂಬುದನ್ನು ನೆನಪಿನಲ್ಲಿಡಿ. ಅದು ಹಾನಿಕಾರಕವಾಗುತ್ತದೆ. ತುಪ್ಪದ ಅನ್ನ ಜೊತೆ ಜೀರಿಗೆ ಪುಡಿ ಬೆರೆಸಿ ತಿಂದರೆ ತೂಕ ವೇಗವಾಗಿ ಕಡಿಮೆ ಆಗುತ್ತದೆ.

**ಚರ್ಮಕ್ಕೆ ಪ್ರಯೋಜನಕಾರಿ:-** ಹೊಳೆಯುವ ಚರ್ಮವನ್ನು ಪಡೆಯಲು ಬಯಸಿದರೆ ತುಪ್ಪವು ಸಹಾಯಕವಾಗಿದೆ. ತುಪ್ಪದಲ್ಲಿ ಕೊಬ್ಬಿನಾಮ್ಲಗಳು ಕಂಡುಬರುತ್ತವೆ. ಇದು ಚರ್ಮಕ್ಕೆ ಬಹಳ ಮುಖ್ಯ. ಇವುಗಳಿಂದಾಗಿ ಚರ್ಮವು ಹೈಡ್ರೇಟಡ್ ಆಗಿರುತ್ತದೆ. ಚರ್ಮದ ಮೇಲಿನ ಸೂಕ್ಷ್ಮ ರೇಖೆಗಳು, ಸುಕ್ಕುಗಳು ಇತ್ಯಾದಿಗಳು ಕಡಿಮೆಯಾಗುತ್ತವೆ. ಇದು ಒಣ ಚರ್ಮಕ್ಕೆ ವಿಶೇಷವಾಗಿ ಪ್ರಯೋಜನಕಾರಿಯಾಗಿದೆ. ಏಕೆಂದರೆ ಇದು ಚರ್ಮದ ಶುಷ್ಕತೆಯನ್ನು ಕಡಿಮೆ ಮಾಡುತ್ತದೆ. ಇದರಲ್ಲಿರುವ ವ್ಯಾ ಉತ್ಕರ್ಷಣ ನಿರೋಧಕಗಳು ಆಕ್ಸಿಡೇಟಿವ್ ಒತ್ತಡವನ್ನು ಕಡಿಮೆ ಮಾಡುತ್ತದೆ.

**ಕೂದಲನ್ನು ಹೊಳೆಯುವಂತೆ ಮಾಡುತ್ತದೆ:-** ತುಪ್ಪವು ಕೂದಲನ್ನು ಮೃದು ಮತ್ತು ಹೊಳೆಯುವಂತೆ ಮಾಡಲು ಸಹಾಯ ಮಾಡುತ್ತದೆ. ಇದರಲ್ಲಿರುವ ಕೊಬ್ಬಿನಾಮ್ಲಗಳು ಕೂದಲಿನ ನೈಸರ್ಗಿಕ ಕಂಡೀಷನಿಂಗ್ ಮಾಡುತ್ತದೆ. ಆದ್ದರಿಂದ, ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ತುಪ್ಪ ತಿನ್ನುವುದರಿಂದ ಕೂದಲಿಗೆ ಹೊಳಪು ಸಿಗುತ್ತದೆ ಮತ್ತು ಕೂದಲು ಉದುರುವಿಕೆ ಕಡಿಮೆಯಾಗುತ್ತದೆ.

**ಕೀಲು ನೋವಿನಿಂದ ಪರಿಹಾರ:-** ತುಪ್ಪ ತಿನ್ನುವುದರಿಂದ ಕೀಲುಗಳ ನಯಗೊಳಿಸುವಿಕೆ ನಡೆಯುತ್ತದೆ, ಇದರಿಂದಾಗಿ ಮೊಣಕಾಲುಗಳು ಮತ್ತು ಇತರ ಕೀಲುಗಳು ಬೇಗನೆ ಸವೆಯುವುದಿಲ್ಲ. ಇದರಲ್ಲಿರುವ ಕೆಲವು ಪೋಷಕಾಂಶಗಳು ಉರಿಯೂತವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ, ಇದು ಕೀಲು ನೋವನ್ನು ಸಹ ಕಡಿಮೆ ಮಾಡುತ್ತದೆ. ಅಲ್ಲದೆ, ಇದು ಮೂಳೆಗಳನ್ನು ಬಲಪಡಿಸಲು ಸಹಾಯ ಮಾಡುತ್ತದೆ.

**ಹೃದಯಕ್ಕೆ ಪ್ರಯೋಜನಕಾರಿ:-** ತುಪ್ಪವನ್ನು ಹೃದಯಕ್ಕೆ ಸಹ ಪ್ರಯೋಜನಕಾರಿ ಎಂದು ಪರಿಗಣಿಸಲಾಗುತ್ತದೆ. ಆರೋಗ್ಯಕರ ಕೊಬ್ಬಿನ ಉಪಸ್ಥಿತಿಯಿಂದಾಗಿ, ಇದು ಉತ್ತಮ ಕೊಲೆಸ್ಟ್ರಾಲ್ ಪ್ರಮಾಣವನ್ನು ಹೆಚ್ಚಿಸುತ್ತದೆ, ಇದು ಹೃದಯ ಕಾಯಿಲೆಗಳ ಅಪಾಯವನ್ನು ಕಡಿಮೆ ಮಾಡಲು ಬಹಳ ಮುಖ್ಯವಾಗಿದೆ. ಇದಲ್ಲದೆ, ಇದು ಉರಿಯೂತವನ್ನು ಕಡಿಮೆ ಮಾಡುತ್ತದೆ. ಇದು ರಕ್ತದೊತ್ತಡವನ್ನು ನಿಯಂತ್ರಿಸುತ್ತದೆ. ಮತ್ತು ಹೃದಯವನ್ನು ಆರೋಗ್ಯವಾಗಿರಿಸುತ್ತದೆ.

**ಜೀರ್ಣಕ್ರಿಯೆಗೆ ಪ್ರಯೋಜನಕಾರಿ:-** ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ತುಪ್ಪ ತಿನ್ನುವುದು ಕರುಳಿನ ಆರೋಗ್ಯವನ್ನು ಸುಧಾರಿಸುತ್ತದೆ. ಅಲ್ಲದೆ, ಖಾಲಿ ಹೊಟ್ಟೆಯಲ್ಲಿ ಇದನ್ನು ತಿನ್ನುವುದು ಕರುಳನ್ನು ನಯಗೊಳಿಸುತ್ತದೆ. ಇದು ಆಹಾರವನ್ನು ಸುಲಭವಾಗಿ ಚಲಿಸಲು ಅನುವು ಮಾಡಿಕೊಡುತ್ತದೆ ಮತ್ತು ಮಲಬದ್ಧತೆ ಮತ್ತು ಉಬ್ಬುವಿಕೆಯಂತಹ ಸಮಸ್ಯೆಗಳನ್ನು ಕಡಿಮೆ ಮಾಡುತ್ತದೆ. ಅಲ್ಲದೆ, ಇದು ಕರುಳಿನ ಆಮ್ಲೀಯತೆಯನ್ನು ಕಡಿಮೆ ಮಾಡುತ್ತದೆ ಮತ್ತು ಪೋಷಕಾಂಶಗಳ ಹೀರಿಕೊಳ್ಳುವಿಕೆಯನ್ನು ಹೆಚ್ಚಿಸುತ್ತದೆ.



# ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ದ್ವೇಷ ಭಾಷಣಗಳು - ಬರಹಗಳು

ಸುಪ್ರೀಂ ಕೋರ್ಟ್ ಸಹ ಈ ವಿಷಯದಲ್ಲಿ ಗೊಂದಲದಲ್ಲಿದೆ. ಅದರಲ್ಲಿ ಆಶ್ಚರ್ಯವೂ ಇಲ್ಲ. ಬಹುಶಃ ಅಭಿವ್ಯಕ್ತಿ ಸ್ವಾತಂತ್ರ್ಯ ಎಂಬುದರ ಅರ್ಥವನ್ನು ಸ್ಪಷ್ಟವಾಗಿ ಹೇಳುವುದು ಸಾಧ್ಯವೇ ಇಲ್ಲ. ಅದನ್ನು ಅನೇಕ ಷರತ್ತುಗಳಿಗೆ ಅನ್ವಯಿಸಿ ಹೇಳಬೇಕಾಗುತ್ತದೆ. ನಮ್ಮ ಅಭಿಪ್ರಾಯ ಏನಿದೆಯೋ ಅದನ್ನು ಮುಕ್ತವಾಗಿ ವ್ಯಕ್ತಪಡಿಸುವ ಸ್ವಾತಂತ್ರ್ಯವನ್ನು ಅಭಿವ್ಯಕ್ತಿ ಸ್ವಾತಂತ್ರ್ಯ ಎಂದು ಕರೆಯಬಹುದೇ?

ಹಾಗಾದರೆ, ಒಬ್ಬ ಸಕ್ಕರೆ ಕಹಿಯಾಗಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಬಹುದು, ಇನ್ನೊಬ್ಬ ಕಾಗೆ ಬೆಳ್ಳಗಿದೆ ಎನ್ನಬಹುದು, ಮತ್ತೊಬ್ಬ ಜಾತಿಯೇ ಶ್ರೇಷ್ಠ ಎಂದು ಹೇಳಬಹುದು, ಮಗದೊಬ್ಬ ಆ ಪಕ್ಷ ದೇಶ ದ್ರೋಹಿ ಎನ್ನಬಹುದು, ಇನ್ಯಾರೋ ಮಹಿಳೆಯರು ಸ್ವಾತಂತ್ರ್ಯಕ್ಕೆ ಅರ್ಹರಲ್ಲ ಎನ್ನಬಹುದು, ಮತ್ತೊಬ್ಬ ಅಧಿಕಾರಿಗಳೆಲ್ಲಾ ಭ್ರಷ್ಟರು ಎನ್ನಬಹುದು, ಮತ್ಯಾರೋ ಯುವಕರೆಲ್ಲಾ ಕೆಟ್ಟವರು ಎನ್ನಬಹುದು, ಅವರ್ಯಾರೋ ಮುಸ್ಲಿಂ, ಕ್ರಿಶ್ಚಿಯನ್ ಸಮುದಾಯದ ಬಗ್ಗೆ ಇನ್ನೇನೋ ಹೇಳಬಹುದು, ಹೀಗೆ ನಾನಾ ರೀತಿಯ ಅಭಿಪ್ರಾಯ ವ್ಯಕ್ತಪಡಿಸಿ ಅದು ನನಗಿರುವ ಅಭಿವ್ಯಕ್ತಿ ಸ್ವಾತಂತ್ರ್ಯ ಎಂದರೆ ಗತಿ ಏನು?

ಒಬ್ಬರು ರಾಮ ಕುಡುಕ ಎಂದರೆ ಮತ್ತೊಬ್ಬರು ದೇವರು ಎನ್ನುತ್ತಾರೆ. ಇಬ್ಬರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯ ಒಂದೇ. ಎಲ್ಲವನ್ನೂ ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಸ್ವಾತಂತ್ರ್ಯ ನಮಗಿದೆ ನಿಜ. ಆದರೆ ಹೀಗೆ ಮಾತನಾಡುತ್ತಾ ಹೋದರೆ ಸಮಾಜದ ಆರೋಗ್ಯದ ಸ್ಥಿತಿ ಏನು? ಸತ್ಯ ಮತ್ತು ವಾಸ್ತವಕ್ಕಿಂತ ಅಭಿವ್ಯಕ್ತಿ ಸ್ವಾತಂತ್ರ್ಯ ದೊಡ್ಡದೇ? ವಿಷಯ ಜ್ಞಾನದ ಆಳ ಅಗಲಗಳ ಅರಿವಿಲ್ಲದೆ, ಪರಿಸ್ಥಿತಿಯ ಒಟ್ಟು ಅವಲೋಕನ ಮಾಡದೆ ಆ ಕ್ಷಣದಲ್ಲಿ ನಮಗೆ ತೋಚಿದ ಅಭಿಪ್ರಾಯ ಹೇಳಿ ಅಭಿವ್ಯಕ್ತಿ ಸ್ವಾತಂತ್ರ್ಯ ಎಂದು ಸಮರ್ಥಿಸಿಕೊಳ್ಳಬಹುದೇ? ಇದು ಉಡಾಫೆ ಮತ್ತು ಅಪಾಯಕಾರಿ ಆಗಬಹುದಲ್ಲವೇ? ಅಭಿವ್ಯಕ್ತಿ ಸ್ವಾತಂತ್ರ್ಯ ಎಂಬುದನ್ನು ಉದಾಹರಣೆ ಸಹಿತ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸೋಣ. ನಿಮಗೆ ಪ್ರೀತಿ ಎಂಬ ಪದ ಮತ್ತು ಭಾವ ತಿಳಿದಿದೆಯಲ್ಲವೇ? ಆ ಪ್ರೀತಿ ಕೇವಲ ಪ್ರೀತಿಯಲ್ಲ. ಅದರಲ್ಲಿ ಮೋಹ, ಸ್ವಾರ್ಥ, ತ್ಯಾಗ, ಸಹಕಾರ, ಅವಲಂಬನೆ, ಜವಾಬ್ದಾರಿ, ಮಾನವೀಯ ಮೌಲ್ಯ, ನಾಗರಿಕ ಪ್ರಜ್ಞೆ, ಸಾಮಾನ್ಯ ಜ್ಞಾನ, ಸೇರಿ ಅನೇಕ ಭಾವನೆಗಳು ಅಡಕವಾಗಿವೆ. ಆ ಎಲ್ಲವುಗಳ ಒಟ್ಟು ಮೊತ್ತ ಪ್ರೀತಿ. ಹಾಗೆಯೇ,.. ಅಭಿವ್ಯಕ್ತಿ ಸ್ವಾತಂತ್ರ್ಯ ಎಂದರೆ,

ಮುಕ್ತತೆ, ಜ್ಞಾನ, ಸಮಷ್ಟಿ ಪ್ರಜ್ಞೆ, ಜವಾಬ್ದಾರಿ, ನೈತಿಕತೆ, ಕಾನೂನಿನ ಅರಿವು, ಸ್ವಾತಂತ್ರ್ಯ, ಪ್ರೀತಿ, ತಾಳ್ಮೆ, ಸ್ವೀಕರಿಸುವ ಮನೋಭಾವ, ಮಾನವೀಯ ಮೌಲ್ಯ, 360 ಡಿಗ್ರಿ ದೃಷ್ಟಿಕೋನ, ವಿನಯ, ಸಭ್ಯತೆ, ಕುಟುಂಬ, ಸಮಾಜ, ದೇಶಪ್ರೇಮದ ಒಲವು, ಕ್ರಿಯಾತ್ಮಕತೆ, ಮುಂತಾದ ಅನೇಕ ಅಂಶಗಳು ಒಳಗೊಂಡಿವೆ. ದೇವರು ಇದ್ದಾನೆ ಅಥವಾ ಇಲ್ಲಾ, ಮಹಿಳೆ ಸ್ವಾತಂತ್ರ್ಯಕ್ಕೆ ಅರ್ಹಳೇ ಅನರ್ಹಳೇ, ಭಾರತ ಹಿಂದು ರಾಷ್ಟ್ರವಾಗಬೇಕೆ ಅಥವಾ ಜಾತ್ಯಾತೀತವಾಗಿ ಉಳಿಯಬೇಕೆ,

ಯುದ್ಧ ಬೇಕೆ ಶಾಂತಿ ಬೇಕೆ, ಹೀಗೆ ಎಲ್ಲಾ



ವಿಷಯಗಳಲ್ಲೂ ವಿಚಾರ ವಿನಿಮಯ ಮತ್ತು ಚರ್ಚೆ ನಡೆಯುತ್ತಲೇ ಇರುತ್ತದೆ. ಆದರೆ, ಅಭಿವ್ಯಕ್ತಿ ಸ್ವಾತಂತ್ರ್ಯ ಇದೆ ಎಂದ ಮಾತ್ರಕ್ಕೆ ಇವುಗಳ ಬಗ್ಗೆ ಸ್ಪಷ್ಟವಾಗಿ ಅರಿಯದೆ, ಪರಿಣಾಮಗಳನ್ನು ಯೋಚಿಸದೆ ಯಾರದೋ ಒತ್ತಡಕ್ಕೆ ಮಣಿದು ನಮ್ಮ ಅಭಿಪ್ರಾಯ ವ್ಯಕ್ತಪಡಿಸಿ, ಅಭಿವ್ಯಕ್ತಿ ಸ್ವಾತಂತ್ರ್ಯದ ನೆಪದಲ್ಲಿ ಸಮಾಜದ ದೇಶದ ಸ್ವಾಸ್ಥ್ಯ ಹಾಳು ಮಾಡುವುದು ಎಷ್ಟು ಸರಿ?

ಹಾಗೆಯೇ ವ್ಯವಸ್ಥೆಯ ಒಳಿತು ಕೆಡಕುಗಳ ಬಗ್ಗೆ, ನಮ್ಮ ಅಂತರಾಳದ ಭಾವನೆಗಳನ್ನು ಹೇಳದೆ ಮೌನವಹಿಸಲು ಮನುಷ್ಯ ಮೂಕ ಪ್ರಾಣಿಯಲ್ಲ ಅಥವಾ ಸರ್ಕಾರಗಳ ಬಂಧಿಯಲ್ಲ ಅಥವಾ ಗುಲಾಮನಲ್ಲ.. ಪ್ರೀತಿಗೆ ಇರುವಂತೆ ಅಭಿವ್ಯಕ್ತಿಗು ಹಲವಾರು ಆಯಾಮಗಳು ಇವೆ. ಅದನ್ನು ಪದಗಳಲ್ಲಿ ಹಿಡಿದಿಡುವುದು ಕಷ್ಟ. ಸಾಹಿತ್ಯ ಸಂಗೀತ ಕಲೆ ಸಮಾಜ ಸೇವೆ ರಾಜಕೀಯ ಮುಂತಾದ ಎಲ್ಲಾ ಕ್ಷೇತ್ರಗಳಲ್ಲು ಅಭಿವ್ಯಕ್ತಿ ಸ್ವಾತಂತ್ರ್ಯ ಉಪಯೋಗ ಮತ್ತು ದುರುಪಯೋಗ ಎರಡೂ ಆಗುತ್ತಿದೆ. ಆದರೆ ಅದು ಸ್ವೇಚ್ಛೆಯಾಗಿ ಅಪಾಯಕಾರಿ ಹಂತ ಮುಟ್ಟಿರುವುದು ಮಾತ್ರ ಆತಂಕಕಾರಿ. ರಕ್ಷಣೆಗಾಗಿ ಇರುವ ಬಂದೂಕು ದುಷ್ಟನ ಕೈಗೆ ಸಿಕ್ಕಿ ಅಮಾಯಕರ ಸಾವಿಗೆ ಕಾರಣವಾಗಬಾರದಲ್ಲವೇ. ಅದೇ ರೀತಿ ಅಭಿವ್ಯಕ್ತಿ ಸ್ವಾತಂತ್ರ್ಯ ಮನುಷ್ಯ ಸ್ವಾತಂತ್ರ್ಯದ - ನಾಗರೀಕತೆಯ ವಿಕಾಸಕ್ಕೆ ಕಾರಣವಾಗಬೇಕೆ ಹೊರತು ಅವನ ವಿನಾಶಕ್ಕೆ ಆಯುಧವಾಗಬಾರದು.

ಪ್ರಜ್ಞಾವಂತರಾದ ಎಲ್ಲರೂ ಜಾಗೃತರಾಗೋಣ. ಅಭಿವ್ಯಕ್ತಿ ಸ್ವಾತಂತ್ರ್ಯ ರಕ್ಷಿಸಿ ಅದನ್ನು ಒಳ್ಳೆಯದಕ್ಕೆ ಉಪಯೋಗಿಸೋಣ. ಪ್ರಜಾಪ್ರಭುತ್ವದ ಬೇರುಗಳು ಇರುವುದು ಅಭಿವ್ಯಕ್ತಿ ಸ್ವಾತಂತ್ರ್ಯದಲ್ಲಿ ನೆನಪಿಡಿ. ಅಭಿವ್ಯಕ್ತಿ ಸ್ವೇಚ್ಛೆಯಲ್ಲ ನಿರ್ಬಂಧಿತ ಸ್ವಾತಂತ್ರ್ಯ, ಅಭಿವ್ಯಕ್ತಿ ಮಿತಿಯೊಳಗೆ ಅಡಗಿದ ಅಪರಿಮಿತ ಸ್ವಾತಂತ್ರ್ಯ, ಅಭಿವ್ಯಕ್ತಿ ಭಾವನೆಗಳ ವಿಕಾಸದೊಳಗೆ ಜವಾಬ್ದಾರಿ ಹೊಂದಿರುವ ಸ್ವಾತಂತ್ರ್ಯ, ಅಭಿವ್ಯಕ್ತಿ ನಮ್ಮ ಹಕ್ಕು ಮತ್ತು ಕರ್ತವ್ಯದೊಳಗಿನ ಸ್ವಾತಂತ್ರ್ಯ, ಅಭಿವ್ಯಕ್ತಿ ಕಾನೂನು, ನೈತಿಕತೆ, ಸ್ವಾಭಾವಿಕತೆಯ ನಾಗರಿಕ ಪ್ರಜ್ಞೆ ಎಂಬ ಸ್ವಾತಂತ್ರ್ಯ, ಅಭಿವ್ಯಕ್ತಿ ನಮ್ಮ ಅರಿವಿನ ಸ್ವಾತಂತ್ರ್ಯ. ಎಲ್ಲವನ್ನೂ ಅಭಿವ್ಯಕ್ತಿಸೋಣ, ತಾಯಿ ಪ್ರೀತಿಯ, ಮಮತೆಯ, ತ್ಯಾಗದ ನೆರಳಿನಲ್ಲಿ....

**- ವಿವೇಕಾನಂದ. ಎಚ್. ಕೆ.,** ಬೆಂಗಳೂರು

# ನೀವು ಬನ್ನಿ !

ಅಯ್ಯೋ ಮತ ಪಡೆದುಕೊಂಡು ಮೇಲೆ ಕುಳಿತವರೇ ವಾರಕ್ಕೊಂದು ಸಲ ನಮ್ಮೂರಿನಲ್ಲಿ ಓಡಾಡಿ, ನಿಮ್ಮದೇ ಗಾಡಿಯಲ್ಲಿ ಅಲ್ಲ, ನಾವು ಓಡಾಡುವ ಬಸ್ಸು ರಿಕ್ಷಾಗಳಲ್ಲಿ , ಪ್ರತೀ ಗಲ್ಲಿಯನ್ನು ತಿರುಗಿ, ಹೇಗೂ ನಿಮಗೆ ಓಡಾಟಕ್ಕೆ ಇಂತಿಷ್ಟು ದುಡ್ಡು ಕೊಡ್ತಾರಲ್ವಾ? ಆಗಾಗ ಫೋನಿನಲ್ಲಿ ಮಾಹಿತಿ ಪಡೆದುಕೊಳ್ಳಿ ಅದಕ್ಕೂ ಹಣ ನಮ್ಮಿಂದಲೇ ಪಡ್ಕೋತಿರಲ್ವ?, ನೀವು ನಮ್ಮ ಸಮಸ್ಯೆ ಆಲಿಸುವುದಕ್ಕೆ ಬರುವುದು ಕಡಿಮೆ ಆದರೂ ಕೆಲವೊಂದು ಕಾರ್ಯಕ್ರಮಗಳಿಗಾದರೂ ನಮ್ಮೂರಿನಿಂದಲೇ ಹಾದು ಹೋಗಿ. ನಿಮ್ಮಲ್ಲಿ ವಿಭಾಗ ಮಾಡಿಕೊಂಡು ವಿಂಗಡನೆ ಮಾಡಿ ತಿರುಗಾಟ ನಡೆಸಿ, ನೀವು ಬರುವ ಸುದ್ದಿ ಗೊತ್ತಾದರೆ ನಮ್ಮೂರಿನ ರಸ್ತೆಗಳು ಗಟ್ಟಿಯಾಗುತ್ತವೆ, ಗುಂಡಿಗಳು ಮಾಯವಾಗುತ್ತವೆ, ನೀರು ಚರಂಡಿಯಲ್ಲಿಯೇ ಹರಿಯುತ್ತದೆ. ಇದೊಂದು ಕೆಲಸ ಮಾಡಿಕೊಡಿ, ನೀವು ಬೇರೆ ಬೇರೆ ಕಡೆ ಉದ್ಘಾಟನೆಯಲ್ಲಿ ತೊಡಗಿಕೊಂಡಿದ್ದರೂ ಇದೊಂದು ಕೆಲಸವನ್ನ ನಿಲ್ಲಿಸಬೇಡಿ. ಯಾಕೆಂದರೆ ಕಳೆದುಕೊಂಡಿರುವುದು ನಾವು ನೀವಲ್ಲ. ನೀವು ಮರೆಯುತ್ತೀರಾ ನಾವಲ್ಲ. ಅಮ್ಮ ನಾಳೆ ಹಲ್ವ ಮಾಡುವುದಕ್ಕೆಂದೇ ತಂದಿಟ್ಟ ಕ್ಯಾರೆಟ್ ಹಾಗೇ ಇದೆ. ಆದರೆ ಅಮ್ಮ ಇಲ್ಲ... ಪ್ಲೀಸ್ ಇದೊಂದು ಮನವಿ ನಡೆಸಿಕೊಡಿ... ಮಗುವಿನ ಪತ್ರ ಅಂಚೆ ಕಛೇರಿ ದಾಟಿ ನಾಯಕರ ಬಳಿ ತೆರಳಿತ್ತು...

**- ಧೀರಜ್** ಬೆಳ್ಳಾರೆ



## ಸಮಯಹರಣ

**ಶ್ರೀಮತಿ:** ಈ ವಾಟ್ಸಾಪ್, ಫೇಸ್ಬುಕ್ ಎಲ್ಲಾ ಸಮಯಹರಣ ಮಾಡುತ್ತದೆ. ಆದ್ದರಿಂದ ಅವುಗಳನ್ನು ಬಿಟ್ಟುಬಿಡಲು ಯೋಚಿಸಿದ್ದೇನೆ.

**ಸೂರಿ:** ನಿನ್ನ ಈ ಯೋಚನೆಯೇನೋ ಒಳ್ಳೆಯದೇ. ಆದರೆ ಇನ್ನೊಮ್ಮೆ ಯೋಚಿಸಿ ನೋಡು. ಈ ವಯಸ್ಸಿನಲ್ಲಿ ಯಾನು ನಿನ್ನನ್ನು ಬ್ಯೂಟಿಫುಲ್, ಮುದ್ದಾಗಿ ಕಾಣಿಸುತ್ತಿರುವೆ, ಸ್ಮಾರ್ಟ್.. ಎಂದೆಲ್ಲಾ ಹೊಗಳುತ್ತಾರೆ, ಲೈಕ್ ಕೊಡುತ್ತಾರೆ?

**ಶ್ರೀಮತಿ:** ಯಾಕ್ರೀ ಸೀರಿಯಸ್ ಆಗ್ತೀರಾ? ನಾನು ತಮಾಷೆಗೆ ಹಾಗೆ ಅಂದದ್ದು.

## ಫೇಸ್ಬುಕ್ ಚಾಟ್

ಕಾಲೇಜು ಕನ್ಯೆ ಶ್ರೀಮತಿ ರಸ್ತೆ ಬದಿಯಲ್ಲಿ ಭಿಕ್ಷುಕನೊಬ್ಬ ಬೇಡುತ್ತಿರುವುದನ್ನು ನೋಡಿಯೂ ನೋಡದಂತೆ ಮುಂದೆ ಸಾಗುತ್ತಿದ್ದಳು. ಅವಳನ್ನು ಗಮನಿಸಿದ ಆ ಭಿಕ್ಷುಕ ಕೀಟಲೆಯ ದನಿಯಲ್ಲಿ ಹೇಳಿದ : ಏನ್ ಮೇಡಂ, ಫೇಸ್ಬುಕ್ ನಲ್ಲಿ ನಂಜೊತೆ ಗಂಟೆಗಟ್ಟಲೆ ಚಾಟಿಂಗ್ ಮಾಡ್ತೀರಿ. ಈಗ ಎದುರಿಗೆ ಬಂದ್ರೂ ನೋಡಿಯೂ ಮಾತನಾಡಿಸದೆ ಹೋಗ್ತಿದ್ದೀರಿ ಎಂದ.



## ಇಂದಿನಿಂದ ರಾಜ್ಯದಲ್ಲಿ ಧಾರಾಕಾರ ಮಳೆ ಸೂಚನೆ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದಾದ್ಯಂತ ಇಂದಿನಿಂದ ಮೂರು ದಿನಗಳ ಕಾಲ ಧಾರಾಕಾರ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬೆಂಗಳೂರು ಸೇರಿ 19 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ತುಮಕೂರು, ಕೋಲಾರ, ಕೊಡಗು, ಹಾಸನ, ಚಿತ್ರದುರ್ಗ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಯಾದಗಿರಿ, ವಿಜಯಪುರ, ರಾಯಚೂರು, ಕೊಪ್ಪಳ, ಕಲಬುರಗಿ, ಗದಗ, ಬೀದರ್, ಬೆಳಗಾವಿ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ಬೀದರ್, ಧಾರವಾಡ, ಹಾವೇರಿ, ಚಾಮರಾಜನಗರ, ಚಿಕ್ಕಮಗಳೂರು, ದಾವಣಗೆರೆ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ವಿಜಯನಗರದಲ್ಲಿ ಸಾಧಾರಣ ಮಳೆಯಾಗಲಿದೆ. ಕಕ್ಕೇರಿ, ಲಿಂಗಸುಗೂರು, ಇಳಕಲ್, ಹುಣಸಗಿಯಲ್ಲಿ ಭಾರಿ ಮಳೆಯಾಗಿದೆ.

# ಅಪಘಾತ: ಹೆಚ್ಚುವರಿ 1 ಲಕ್ಷ ರೂ. ನೆರವು

## ರಾಜ್ಯ ಸರ್ಕಾರ ಅನುಮೋದನೆ

• ಪ್ರಜೋದಯ ವರದಿ

**ಬೆಂಗಳೂರು:** ರಸ್ತೆ ಅಪಘಾತ ಸಂತ್ರಸ್ತರಿಗೆ ಹೆಚ್ಚುವರಿಯಾಗಿ 1 ಲಕ್ಷ ರೂ. ಆರ್ಥಿಕ ನೆರವು ನೀಡಲು ಕರ್ನಾಟಕ ಸರ್ಕಾರ ಅನುಮೋದನೆ ನೀಡಿದೆ. ಇದು ಕೇಂದ್ರದ ರಸ್ತೆ ಅಪಘಾತ ಸಂತ್ರಸ್ತರಿಗೆ ನಗದು ರಹಿತ ಚಿಕಿತ್ಸಾ ಯೋಜನೆ(ಸಿಟಿಆರ್ಎವಿ) 2025 ರ ಅಡಿಯಲ್ಲಿ ಅಸ್ತಿತ್ವದಲ್ಲಿರುವ 1.5 ಲಕ್ಷ ರೂ. ನಗದು ರಹಿತ ಚಿಕಿತ್ಸಾ ಪ್ರಯೋಜನಕ್ಕೆ ಪೂರಕವಾಗಿದೆ.

ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (ಎಸ್ಎಎಸ್ಟಿ) ಪ್ರಸ್ತಾವನೆಯನ್ನು ಅನುಸರಿಸಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಅಪಘಾತ ಸಂಬಂಧಿತ ಸಾವು ನೋವುಗಳಲ್ಲಿ ಕರ್ನಾಟಕ ದೇಶದಲ್ಲಿ ಐದನೇ ಸ್ಥಾನದಲ್ಲಿದ್ದು, ರಾಜ್ಯದಲ್ಲಿ, ಪ್ರತಿ ವರ್ಷ ಸುಮಾರು 40,000 ಅಪಘಾತಗಳು ದಾಖಲಾಗುತ್ತವೆ. ಇದರ ಪರಿಣಾಮವಾಗಿ ಪ್ರತಿ ವರ್ಷ ಸುಮಾರು 11,000 ಸಾವುಗಳು ಸಂಭವಿಸುತ್ತಿವೆ ಎಂದು ಎಸ್ಎ




ಎಸ್‌ಟಿ ಹೇಳಿದೆ.

ಅಧಿಸೂಚನೆಯ ಪ್ರಕಾರ, ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ, 1988 ರ ಮೋಟಾರು ವಾಹನ ಕಾಯ್ದೆಯ ಸೆಕ್ಷನ್ 162 ರ ಅಡಿಯಲ್ಲಿ, ಯೋಜನೆ 2025 ಅನ್ನು ಪ್ರಕಟಿಸಿದೆ.

ಈ ಯೋಜನೆಯಡಿಯಲ್ಲಿ, ಗೋಲ್ಡನ್ ಅವರ್ (ಮೊದಲ ಒಂದು ಗಂಟೆ) ಸಮಯದಲ್ಲಿ ಮತ್ತು ಅಪಘಾತದ ನಂತರ ಏಳು ದಿನ

» **ಪ್ರತಿ ವರ್ಷ ಸುಮಾರು 40,000 ಅಪಘಾತಗಳು ದಾಖಲಾಗುತ್ತಿದ್ದು, ಇದರ ಪರಿಣಾಮವಾಗಿ 11,000 ಜನರ ಸಾವಾಗುತ್ತಿದೆ.**

ಗಳವರೆಗೆ ಪ್ರತಿ ವ್ಯಕ್ತಿಗೆ 1.5 ಲಕ್ಷ ರೂ. ಗಳ ಮಿತಿಯವರೆಗೆ ಉಚಿತ ತುರ್ತು ವೈದ್ಯಕೀಯ ಚಿಕಿತ್ಸೆ ನೀಡಲಾಗುತ್ತದೆ.

ಅಡಿಯಲ್ಲಿ 1.5 ಲಕ್ಷ ರೂ. ನೆರವು ಸಾಮಾನ್ಯವಾಗಿ ಸಾಕಾಗುತ್ತದೆ. ಆದರೆ ಏಳು ದಿನಗಳನ್ನು ಮೀರಿದ ಚಿಕಿತ್ಸೆ ಅಗತ್ಯವಿರುವ ಬಹು ಅಂಗಾಂಗ ವೈಫಲ್ಯ, ವೆಂಟಿಲೇಟರ್ ಬೆಂಬಲ ಅಥವಾ ನಿರ್ಣಾಯಕ ಆರೈಕೆಯಂತಹ ವಿಶೇಷ ಪ್ರಕರಣಗಳಲ್ಲಿ ಹೆಚ್ಚಿನ ನೆರವಿನ ಅಗತ್ಯ ಇದೆ ಎಂದು ಅದು ಹೇಳಿದೆ.

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ರಾಜ್ಯ ಸರ್ಕಾರವು ಅಸ್ತಿತ್ವದಲ್ಲಿರುವ ಅಪಘಾತ ಸಂತ್ರಸ್ತ ಯೋಜನೆಯ ಮಾರ್ಪಾಡುಗಳನ್ನು ಅನುಮೋದಿಸುತ್ತದೆ. ಇದರಿಂದಾಗಿ ಭಾರತ ಸರ್ಕಾರದ 2025 ಯೋಜನೆಯ ಜೊತೆಗೆ, ರಾಜ್ಯ ಸರ್ಕಾರವು ಪ್ರತಿ ವ್ಯಕ್ತಿಗೆ ರೂ. 1 ಲಕ್ಷ ಟಾಪ್-ಅಪ್ ಅನ್ನು ಒದಗಿಸುತ್ತದೆ ಎಂದು ಸೆಪ್ಟೆಂಬರ್ 15 ರ ಆದೇಶದಲ್ಲಿ ತಿಳಿಸಲಾಗಿದೆ.

ಪರಿಷ್ಕೃತ ರಾಜ್ಯ ಯೋಜನೆಯಡಿಯಲ್ಲಿ, ವೆಂಟಿಲೇಟರ್ ಬೆಂಬಲದಲ್ಲಿರುವ ರೋಗಿಗಳು, ಬಹು-ಅಂಗಾಂಗ ವೈಫಲ್ಯ ಹೊಂದಿರುವವರು ಅಥವಾ ಏಳು ದಿನಗಳ ಮಿತಿಯನ್ನು ಮೀರಿ ಚಿಕಿತ್ಸೆ ಮುಂದುವರಿಸುವ ಇತರ ನಿರ್ಣಾಯಕ ಆರೈಕೆಯ ಅಗತ್ಯವಿರುವವರು ರಾಜ್ಯ ಪ್ಯಾಕೇಜ್ ಅಡಿಯಲ್ಲಿ ರೂ. 1 ಲಕ್ಷ ಹೆಚ್ಚುವರಿ ಟಾಪ್-ಅಪ್‌ಗೆ ಅರ್ಹರಾಗಿರುತ್ತಾರೆ.

## ಕರ್ನಾಟಕ ಪಬ್ಲಿಕ್ ಶಾಲೆಗೆ ಸಮಗ್ರ ಪ್ರಶಸ್ತಿ



• ಪ್ರಜೋದಯ ವರದಿ

**ಹಳೇಬೀಡು:** ಇಲ್ಲಿಯ ಕರ್ನಾಟಕ ಪಬ್ಲಿಕ್ ಶಾಲೆಯ ಪ್ರೌಢಶಾಲಾ ವಿಭಾಗದ ಬಾಲಕ, ಬಾಲಕಿಯರ ತಂಡ ಸಮಗ್ರ ಪ್ರಶಸ್ತಿ ಪಡೆದಿದೆ.

ಬಾಲಕರ ವಿಭಾಗದಲ್ಲಿ ಟಿ.ವಿ. ವಿನಯ್, ಎಚ್.ಡಿ,.ಜೀವನ್, ಎನ್.ಎಂ.ದರ್ಶನ್, ಬಾಲಕೀಯರಲ್ಲಿ ಸಿ.ಎಸ್. ಬಾಂಧವ್ಯ, ವಾಣಿಶ್ರೀ, ಲೇಖನ ಜಿಲ್ಲಾ ಮಟ್ಟದ ಕೊಕ್ಕೊ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ಬಾಲಕಿಯರು ರಿಲೇಯಲ್ಲಿ ಪ್ರಥಮ ಬಹುಮಾನ ಪಡೆದಿದ್ದಾರೆ. ಬಾಲಕರ ತಂಡದಲ್ಲಿ ಎಚ್.ಎಸ್.ನಂದನ್ ಹ್ಯಾಮರ್ ಥ್ರೋನಲ್ಲಿ ಪ್ರಥಮ ಬಹುಮಾನ ಪಡೆದಿದ್ದಾರೆ. ಬಾಲಕರ ತಂಡ ರಿಲೇಯಲ್ಲಿ ಪ್ರಥಮ ಬಹುಮಾನ ಪಡೆದಿದೆ.

ಜಿಲ್ಲಾ ಮಟ್ಟದ ಕ್ರೀಡಾ ಕೂಟಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳು, ತರಬೇತಿ ನೀಡಿದ ದೈಹಿಕ ಶಿಕ್ಷಣ ಶಿಕ್ಷಕರಾದ ಪಿ.ಸಿ.ಮಹೇಶ್ ಹಾಗೂ ಜೆ.ಆರ್. ವಸಂತಕುಮಾರಿ ತಂಡದ ಮೇಲ್ವಿಚಾರಕರಾದ ಪ್ರಸನ್ನಕುಮಾರ್, ಸುರೇಶ್ ನಾಯ್ಕ, ಚಂದ್ರಶೇಖರ್ ಎನ್.ಲಕ್ಷ್ಮಿ ಹಾಗೂ ಕ್ರೀಡಾಕೂಟಕ್ಕೆ ಪ್ರೋತ್ಸಾಹಿಸಿದ ಶಿಕ್ಷಕರನ್ನು ಎಸ್.ಡಿ.ಎಂ.ಸಿ ಅಧ್ಯಕ್ಷ, ಬಿ.ಎಸ್.ಸೋಮಶೇಖರ್, ಪ್ರಭಾರ ಉಪಪ್ರಾಂಶುಪಾಲ ಮೋಹನ್ ರಾಜು ಅಭಿನಂದಿಸಿದ್ದಾರೆ.

## ಭಾಷಣ ಸ್ಪರ್ಧೆ: ಕೀರ್ತಿರಾಜ್‌ಗೆ ಪ್ರಥಮ ಸ್ಥಾನ



**ಹಾಸನ: ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಅಂಗವಾಗಿ ನನ್ನ ಮತ ನನ್ನ ಹಕ್ಕು ಎಂಬ ವಿಷಯದ ಕುರಿತು ಆಯೋಜಿಸಲಾದ ಭಾಷಣ ಸ್ಪರ್ಧೆಯಲ್ಲಿ ನಗರದ ಎಂ. ಕೃಷ್ಣ ಕಾನೂನು ಮಹಾವಿದ್ಯಾಲಯದ ಅಂತಿಮ ವರ್ಷದ ವಿದ್ಯಾರ್ಥಿ ಕೀರ್ತಿರಾಜ್ ಪ್ರಥಮ ಸ್ಥಾನ ಪಡೆದಿದ್ದಾರೆ.**
**ನಗರದ ಅಂಬೇಡ್ಕರ್ ಭವನದಲ್ಲಿ ನಡೆದ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಕಾರ್ಯಕ್ರಮದಲ್ಲಿ ಸಂಸದ ಶ್ರೇಯಸ್ ಪಟೇಲ್ ಬಹುಮಾನ ವಿತರಿಸಿದರು. ಪ್ರಾಂಶುಪಾಲರು ಕೀರ್ತಿರಾಜ್‌ಗೆ ಅಭಿನಂದನೆ ಸಲ್ಲಿಸಿದ್ದಾರೆ.**

## ಇಸ್ರೇಲ್ ಕಾರ್ಯಾಚರಣೆ; ಲಕ್ಷಾಂತರ ಮಂದಿ ಪಲಾಯನ!

• ಪ್ರಜೋದಯ ವರದಿ

**ಇಸ್ರೇಲ್:** ಇಸ್ರೇಲ್ ಸೇನೆ ಬುಧವಾರ ಗಾಜಾ ನಗರದ ಮೇಲೆ ಭೂ ಆಕ್ರಮಣ ಕಾರ್ಯಾಚರಣೆ ಪ್ರಾರಂಭಿಸಿದ್ದು ಪ್ಯಾಲೆಸ್ತೀನಿಯನ್ ಪ್ರದೇಶವನ್ನು ಆಕ್ರಮಿಸಿಕೊಳ್ಳುವ ಕಾರ್ಯದಲ್ಲಿ ಗಾಜಾದಲ್ಲಿ ಕನಿಷ್ಠ 62 ಪ್ಯಾಲೆಸ್ತೀನಿಯರು ಸಾವನ್ನಪ್ಪಿದ್ದಾರೆ ಎಂದು ಅಲ್ ಜಜೀರಾ ವರದಿ ಮಾಡಿದೆ.

ಜನನಿಬಿಡ ಪ್ರದೇಶಗಳಿಗೆ ನುಗ್ಗಿದೆ. ಇಸ್ರೇಲ್ ದಾಳಿಗಳನ್ನು ತೀವ್ರಗೊಳಿಸುವ ಮೊದಲು ಪ್ಯಾಲೆಸ್ತೀನಿಯನ್ನರು ಕೆಲವೇ ನಿಮಿಷಗಳು ಉಳಿದಿರುವಾಗ ಪಲಾಯನ ಮಾಡಬೇಕಾಯಿತು. ಇಸ್ರೇಲ್ ಭೂ ಆಕ್ರಮಣವನ್ನು ಪ್ರಾರಂಭಿಸಿದ ನಂತರ ಮಧ್ಯ ಗಾಜಾ ನಗರದ ದರಾಜ್ ವಸತಿ ನೆರೆಹೊರೆಯಲ್ಲಿ ಕನಿಷ್ಠ 20 ಜನರು ಸಾವನ್ನಪ್ಪಿದ್ದಾರೆ.

ವಿಶ್ವಸಂಸ್ಥೆಯ ತನಿಖೆಯು ಇಸ್ರೇಲ್



ಗಾಜಾದಲ್ಲಿ ನರಮೇಧವನ್ನು ಮಾಡುತ್ತಿದೆ ಎಂದು ದೃಢಪಡಿಸಿದ ನಂತರ ಜಗತ್ತಿನಾದ್ಯಂತ ಭಾರಿ ಆಕ್ರೋಶ ವ್ಯಕ್ತವಾದ ಬೆನ್ನಲ್ಲೇ ಈ ಕಾರ್ಯಾಚರಣೆ ಕೈಗೊಂಡಿದೆ. ಇಸ್ರೇಲಿ ಅಧಿಕಾರಿಗಳು ಮತ್ತು ಇಸ್ರೇಲಿ ಭದ್ರತಾ ಪಡೆಗಳು ಗಾಜಾ ಪಟ್ಟಿಯಲ್ಲಿರುವ ಪ್ಯಾಲೆಸ್ಟೀನಿಯನ್ನರನ್ನು ಸಂಪೂರ್ಣ ನಾಶಮಾಡುವ ನರಮೇಧದ ಉದ್ದೇಶವನ್ನು ಹೊಂದಿವೆ ಎಂದು ಯುಎನ್ ಇಂಡಿಪೆಂಡೆಂಟ್ ಇಂಟರ್ನ್ಯಾಷನಲ್ ಕಮಿಷನ್ ಆಫ್ ಇನ್‌ಕ್ವೈರಿ (ಸಿಒಐ) ತನ್ನ ವರದಿಯಲ್ಲಿ ತಿಳಿಸಿದೆ.

## ನೇಕಾರರ ಸಮ್ಮಾನ್ ಯೋಜನೆಗೆ ಅರ್ಜಿ ಆಹ್ವಾನ

ಹಾಸನ: ಕೈಮಗ್ಗ ಮತ್ತು ಜವಳಿ ಇಲಾಖೆಯು ಕೈಮಗ್ಗ ಮತ್ತು ವಿದ್ಯುತ್ ಮಗ್ಗ ನೇಕಾರರಿಗೆ ನೇಕಾರಿಕೆ ವೃತ್ತಿಯಲ್ಲಿ ತೊಡಗಿರುವ ನೇಕಾರರಿಗೆ ವಾರ್ಷಿಕವಾಗಿ 5,000 ರೂ. ಗಳನ್ನು ನೀಡಲು ನೇಕಾರರ ಸಮ್ಮಾನ್ ಯೋಜನೆಯಡಿ ಈಗಾಗಲೇ 2025-26 ನೇ ಸಾಲಿಗೆ ನೊಂದಾಯಿತರಾಗಿರುವ ನೇಕಾರರಿಂದ ಹಾಗೂ ನೇಕಾರಿಕೆಗೆ ಸಂಬಂಧಿಸಿದ ಇತರೆ ಚಟುವಟಿಕೆಗಳಲ್ಲಿ ತೊಡಗಿರುವ ಕೈಮಗ್ಗ, ವಿದ್ಯುತ್ ಮಗ್ಗ ನೇಕಾರರಿಂದ ಹೊಸದಾಗಿ ಅರ್ಜಿಗಳನ್ನು ಪಡೆದು ಅರ್ಹರಿರುವ ನೇಕಾರರ ಅರ್ಜಿಗಳನ್ನು ಸೇವಾ ಸಿಂಧು ಪೋರ್ಟ್‌ನಲ್ಲಿ ಅಪ್‌ಲೋಡ್ ಮಾಡಲು ತಿಳಿಸಲಾಗಿದೆ.

2024-25 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ಈಗಾಗಲೇ ಸೌಲಭ್ಯ ಪಡೆದಿರುವ ಕೈಮಗ್ಗ ಮತ್ತು ವಿದ್ಯುತ್ ಮಗ್ಗ ನೇಕಾರರಿಂದ ಹಾಗೂ ಕೈಮಗ್ಗ, ವಿದ್ಯುತ್ ಮಗ್ಗ ನೇಯ್ಗೆಗೆ ಸಂಬಂಧಿಸಿದ ಇತರೆ ಚಟುವಟಿಕೆಯಲ್ಲಿ ತೊಡಗಿರುವ ಅರ್ಹ ನೇಕಾರರಿಂದ, ನೇಕಾರ ಸಹಕಾರ ಸಂಘಗಳ ಮೂಲಕ ಅರ್ಜಿ ಪಡೆಯಲಾಗುತ್ತಿದ್ದು, ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಈ ಕೆಳಕಂಡ ದಾಖಲಾತಿಗಳೊಂದಿಗೆ ನೇಕಾರ ಸಹಕಾರ ಸಂಘಗಳ ಮೂಲಕ ಅಥವಾ ನೇರವಾಗಿ ಸಹಾಯಕ ನಿರ್ದೇಶಕರ ಕಚೇರಿ, ಕೈಮಗ್ಗ ಮತ್ತು ಜವಳಿ ಇಲಾಖೆ, ಬಿ.ಎಂ. ರಸ್ತೆ, ಹೆಚ್.ಡಿ.ಸಿ.ಸಿ ಬ್ಯಾಂಕ್ ಹತ್ತಿರ, ಡೈರಿ ಸರ್ಕಲ್, ಹಾಸನ ಕಚೇರಿಗೆ ಸೆ.25 ರೊಳಗಾಗಿ ಸಲ್ಲಿಸುವುದು ಎಂದು ಕೈಮಗ್ಗ ಮತ್ತು ಜವಳಿ ಇಲಾಖೆಯ ಸಹಾಯಕ ನಿರ್ದೇಶಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




**ಅರೇಹಳ್ಳಿ: ಇಲ್ಲಿನ ರೋಟರಿ ಸಂಸ್ಥೆಯು ಪೊಲೀಸ್ ಸಿಬ್ಬಂದಿಗಳ ಸಹಕಾರದೊಂದಿಗೆ ಡ್ರೈವ್ ಸೇಫ್, ಸೇವ್ ಲೈಫ್' ಎಂಬ ಧ್ಯೇಯವಾಕ್ಯದಡಿ ವಾಹನ ಚಾಲಕರಿಗೆ ಸುರಕ್ಷತೆಯಿಂದ ವಾಹನ ಚಾಲನೆ ಮಾಡುವಂತೆ ಜಾಗೃತಿ ಮೂಡಿಸಲಾಯಿತು.**
**ಈ ವೇಳೆ ಆಟೋಗಳಿಗೆ ಸ್ಟಿಕ್ಕರ್ ಜೊತೆಗೆ ರಿಫ್ಲೆಕ್ಟರ್‌ಗಳನ್ನು ಅಂಟಿಸಿ ಜಾಗರೂಕತೆಯಿಂದ ವಾಹನ ಚಲಾಯಿಸಿ ಅಮೂಲ್ಯ ಜೀವವನ್ನು ಉಳಿಸುವಂತೆ ಕರೆ ನೀಡಲಾಯಿತು.**
**ಕಾರ್ಯಕ್ರಮದಲ್ಲಿ ರೋಟರಿ ಸಂಸ್ಥೆಯ ಅಧ್ಯಕ್ಷ ರೋ.ಪ್ರಸನ್ನ ಎಂ.ಸ್,ಪ್ರವೀಣ್ ಎಂ.ವೈ., ಬಿ.ಎಂ.ಶರತ್, ಪೃಥ್ವಿ ಬಿ.ಯು ಇದ್ದರು.**

# ಶಾಲೆ ಗೋಡೆ ಮೇಲೆ ಬಣ್ಣ ಬಣ್ಣದ ಚಿತ್ತಾರ; ಮೆಚ್ಚುಗೆ

• ಪ್ರಜೋದಯ ವರದಿ

**ಹಾರನಹಳ್ಳಿ:** ಸೇವೆ ನಮ್ಮ ಗುರಿ ಎನ್ನುವ ಉದೇಶದಿಂದ ಸಮೀಪದ ಚೀಲನಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆಯ ಗೋಡೆಯ ಮೇಲೆ ಬಣ್ಣದ ಚಿತ್ರಗಳನ್ನು ಬಿಡಿಸಿ ಶಾಲೆಯ ಗೋಡೆಯನ್ನು ಆಕರ್ಷಣೆ ರೀತಿಯ ಮಾಡಿದ ಸಮರ್ಪಣ ತಂಡಕ್ಕೆ ಶಾಲೆಯ ಎಸ್.ಡಿ.ಎಂ.ಸಿ ಅಧ್ಯಕ್ಷ ವಿರೂಪಾಕ್ಷಪ್ಪ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಮುದುಡಿ ಗ್ರಾಮ ಪಂಚಾಯತಿ ಅಧ್ಯಕ್ಷ ರಂಗಸ್ವಾಮಿ ಮಾತನಾಡಿ, ಸರ್ಕಾರಿ ಶಾಲೆಯಲ್ಲಿ ಉತ್ತಮ ಸೌಲಭ್ಯವಿದ್ದು ಪೋಷಕರು ತಮ್ಮ ಮಕ್ಕಳುಗಳನ್ನು ಸರ್ಕಾರಿ ಶಾಲೆಗೆ ಸೇರಿಸುವಂತೆ ತಿಳಿಸಿದ ಅವರು, ಸಮರ್ಪಣಾ ತಂಡದವರು ನಮ್ಮ ಗ್ರಾಮೀಣ ಭಾಗದ ಶಾಲೆಗಳಿಗೆ ಬಂದು ಶಾಲೆಯ ಗೋಡೆಯ ಮೇಲೆ



ವಿಶೇಷವಾಗಿ ಬಣ್ಣವನ್ನು ಬಳಿದು ನಂತರ ಗೋಡೆಯ ಮೇಲೆ ಯಕ್ಷಗಾನ ನಮ್ಮ ದೇಶಿಯ ಕಲೆಗೆ ಸಂಬಂಧಿಸಿದ ಚಿತ್ರಗಳನ್ನ ಬರೆದಿರುವುದರಿಂದ ಮಕ್ಕಳಿಗೆ ಇದರಿಂದ ಲೋಕ ಜ್ಞಾನ ಹೆಚ್ಚಾಗುತ್ತದೆ ಎಂದು ತಿಳಿಸಿದರು.

ಮುಖ್ಯ ಶಿಕ್ಷಕ ನಂದೀಶ್ ಮಾತನಾಡಿ, ನಮ್ಮ ಶಾಲೆಗೆ ಎರಡು ದಿನಗಳ ಕಾಲ ಸಮರ್ಪಣಾ ತಂಡದವರು ಶಾಲೆಯ ಸುತ್ತ ಕಾಂಪೌಂಡ್ ಹಾಗೂ ಶಾಲೆಗೆ ಗೋಡೆಯ ಮೇಲೆ ಅನೇಕ ಬಗೆಯ ಚಿತ್ರಗಳನ್ನು ಬಿಡಿಸಿದ್ದು ಶಾಲೆಯ ಆವರಣ ಸುಂದರವಾಗಿದೆ ಕಾಣಿಸುತ್ತದೆ ಎಂದರು.

ಸಮರ್ಪಣಾ ತಂಡದಮುಖ್ಯಸ್ಥ ಸಚ್ಚಿನ್ ರಾಜ್ ಮಾತನಾಡಿ, ಅನೇಕ ವಿದ್ಯಾರ್ಥಿಗಳು ಇತರ ಸ್ವಯಂ ಸೇವಕರು ಸೇರಿ ಸೇವಾ ಮನೋಭಾವದಿಂದ ಅನೇಕ ಶಾಲೆಯ ಗೋಡೆಗೆ ಪರಿಸರ ಜಾಗೃತಿ ಮಾಡಿಸುವ ಚಿತ್ರಗಳು ನಾಡಿನ ಪ್ರವಾಸಿ ಸ್ಥಳ ಜಾನಪದ ಚಿತ್ರಗಳು ಬಿಡಿಸುವುದರಿಂದ ಇದರಿಂದ ಮಕ್ಕಳಿಗೆ ತಿಳಿಯುವ ಕುತೂಹಲ ಹೆಚ್ಚಾಗುತ್ತದೆ ಎಂದರು.

ಸಚ್ಚಿನ್ ರಾಜ್, ಸೌಜನ್ಯ ವಿಜಾಯಾಪುರ, ಸಿದ್ದೇಶ್, ಅಶ್ವತ್, ಅನಿತಾ, ಕುಷಿ, ಪುನೀತ್, ಚಿನ್ಮಯ ಭಾರಧಾಜ್, ಕೃಷ್ಣ ಅವರನ್ನು ಶಾಲೆ ಸಮಿತಿ ಗ್ರಾಮಸ್ಥರು ಸನ್ಮಾನಿಸಿದರು. ಕಾರ್ಯಕ್ರಮದಲ್ಲಿ ಶಾಲೆ ಶಿಕ್ಷಕರು, ಗ್ರಾಮಸ್ಥರು ಹಾಜರಿದ್ದರು.

# ಕೌಶಲ್ಯ ಆಧಾರಿತ ಉದ್ಯಮಗಳಿಂದ ಜೀವನ ಮಟ್ಟ ಸುಧಾರಣೆ

• ಪ್ರಜೋದಯ ವರದಿ

**ಹಾರನಹಳ್ಳಿ:** ಕೌಶಲ್ಯ ಆಧಾರಿತ ಉದ್ಯಮಗಳಿಂದ ಸ್ವಾವಲಂಬಿ ಸ್ವತಂತ್ರ ಜೀವನ ನಡೆಸಲು ಸಹಕಾರವಾಗುತ್ತದೆ. ರೇಷ್ಮೆ ಸಾಕಾಣಿಕೆ, ಕುರಿ, ಕೋಳಿ, ಜೇನು ಸಾಕಾಣಿಕೆ, ಹೈನುಗಾರಿಕೆ, ಎರೆಹುಳು ಗೊಬ್ಬರ ತಯಾರಿಕೆ, ಅಣಬೆ ಬೇಸಾಯ ಇವುಗಳನ್ನು ನುರಿತರಿಂದ ತರಬೇತಿ ಪಡೆದು ಲಾಭಗಳಿಸಿದರೆ ಜೀವನ ಮಟ್ಟ ಸುಧಾರಿಸಲು ಸಹಕಾರವಾಗುತ್ತದೆ ಎಂದು ಕೃಷಿ ಇಲಾಖೆ ಜಂಟಿ ನೀರ್ದೇಶಕ ರಮೇಶ್ ಕುಮಾರ್ ತಿಳಿಸಿದರು.

ಹಾರನಹಳ್ಳಿ ಗ್ರಾಮ ಪಂಚಾಯತಿ ಸಮುದಾಯಭವನದಲ್ಲಿ ನಡೆದ ಕೃಷಿ ಇಲಾಖೆ ಅರಸೀಕೆರೆ, ಜಲಾನಯನ ಅಭಿವೃದ್ಧಿ ಇಲಾಖೆ, ಹಾಸನ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ ಇವರ ಸಹಯೋಗದಲ್ಲಿ ವಿಶ್ವ ಬ್ಯಾಂಕ್ ನೆರವಿನ



ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ ದೊಡ್ಡೇನಹಳ್ಳಿ ನಾಲಾ ಉಪಯೋಜನೆ ನವೀನ ಅಭಿವೃದ್ಧೀ ಮೂಲಕ ಕೃಷಿ ಕಾರ್ಯಗಾರ ಎರಡು ದಿನದ ಸ್ವಸಾಯ ಸಂಘದ ಸದಸ್ಯರಿಗೆ ಉದ್ಯಮ ಶೀಲಾ ಅರಿವು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಹಾಸನ ಕೃಷಿ ಉಪ ಇಲಾಖೆ ಉಪ ನಿರ್ದೇಶಕ ಅಶೋಕ್‌ಕುಮಾರ್ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಮಹಿಳೆಯರು ಸಂಘಗಳನ್ನು ಆರಂಭ ಮಾಡಿ ಬ್ಯಾಂಕ್‌ನಿಂದ ಸಾಲ ಪಡೆದು ಬಡ್ಡಿ ಕಟ್ಟಿ ಸಾಲ ತೀರಿಸಿದರೆ ಸಾಲದು, ಈ ಸಂಘಗಳಿಂದ ಸದಸ್ಯರು ತರಬೇತಿ ಪಡೆದು ಉದ್ಯಮ ಮಾಡಿ ಗ್ರಾಮೀಣ ಭಾಗದ ಜನರಿಗೆ ಉದ್ಯೋಗ ಸೃಷ್ಠಿಯಾಗುತ್ತದೆ ಎಂದರು.

ಜಲಾನಯನ ವ್ಯಾಪ್ತಿಯಲ್ಲಿ ಬರುವ ಸದಸ್ಯರುಗಳಿಗೆ ಕೆನರಾ ಬ್ಯಾಂಕ್ ಗ್ರಾಮಿಣ ಸ್ವ ಉದ್ಯೋಗ ತರಬೇತಿ ಸಂಸ್ಥೆಯಿಂದ ತಾಂತ್ರಿಕ ತರಬೇತಿ ನೀಡಲಾಗುತ್ತದೆ. ಇದರ ಉಪಯೋಗ ಪಡೆಯುವಂತೆ ಸಲಹೆ ನೀಡಿದರು.

ಅರಸೀಕೆರೆ ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಶಿವಕುಮಾರ್ ಮಾತನಾಡಿ, ಕೃಷಿ ಇಲಾಖೆಯ ಅನೇಕ ಯೋಜನೆ ನೆರವುಗಳ ಬಗ್ಗೆ ಮಾಹಿತಿ ನೀಡಿದರು.

ಕೆನರಾ ಬ್ಯಾಂಕ್ ಹರ್ಷಿತ್‌ಕುಮಾರ್ ಮಾತನಾಡಿ, ಯುವಕ ಯುವತಿಯರಿಗೆ ಉದ್ಯಮ ಶೀಲತಾ ಅಭಿವೃದ್ಧಿ ತರಬೇತಿ ವಿಕಲಚೇತರಿಗೆ ಉದ್ಯಮಶೀಲತಾ ಅಭಿವೃದ್ಧಿ ತರಬೇತಿ ಇತರ 25 ವಿವಿದ ಯೋಜನೆ ಬಗ್ಗೆ ತಾಂತ್ರಿಕ ತರಬೇತಿ ನೀಡಲಾಗುವುದು. ಎಂದರು.

ಗ್ರಾಪಂ ಕಾರ್ಯದರ್ಶಿ ಚಂದ್ರಶೇಖರ್ ಹಾಗೂ ಕೃಷಿ ಇಲಾಖೆ ಅಧಿಕಾರಿಗಳಿದ್ದರು.



**ಹಾಸನ: ಬೆಂಗಳೂರಿನ ಚಲನಚಿತ್ರ ಹಾಸ್ಯನಟರು ಮೈಸೂರು ರಮಾನಂದ್ ಸಾರಥ್ಯದ ಹೆಜ್ಜೆ ಗೆಜ್ಜೆ ರಂಗ ತಂಡದ 50ನೇ ವರ್ಷದ ಪಾದಾರ್ಪಣೆಯ ಸಂಭ್ರಮ ಹಾಗೂ ಆಶಾದಿ ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಮಕ್ಕಳ ನಾಟಕ ಕೃತಿ ಲೋಕಾರ್ಪಣೆ, ರಂಗ ಸಂಗೀತ, ನಾಟಕ ಪ್ರದರ್ಶನ ಕಾರ್ಯಕ್ರಮ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಿತು.**
**ಈ ಸಂದರ್ಭದಲ್ಲಿ ಸಾಹಿತಿ, ನಾಟಕಕಾರ ಗೊರೂರು ಅನಂತರಾಜು ಅವರ ಕಲಾ ಸೇವೆ, ಸಾಂಸ್ಕೃತಿಕ ಸಂಘಟನೆ, ನಾಟಕ, ಸಾಹಿತ್ಯ ಸೇವೆ ಗುರುತಿಸಿ ರಂಗ ಪುರಸ್ಕಾರವನ್ನು ಹೆಜ್ಜೆ ಗೆಜ್ಜೆ ತಂಡದ ಸಂಸ್ಥಾಪಕ ಅಧ್ಯಕ್ಷ ಮತ್ತು ಚಲನಚಿತ್ರ ನಟ ಮೈಸೂರು ರಮಾನಂದ್‌ಅವರು ನೀಡಿ ಸನ್ಮಾನಿಸಿದರು.**

# ಬಿಜಿಎಸ್ ವಿಜ್ಞಾನ ಪ.ಪೂ. ಕಾಲೇಜಿಗೆ ಪ್ರಶಸ್ತಿ

• ಪ್ರಜೋದಯ ವರದಿ

**ಬೇಲೂರು:** ಬಿಜಿಎಸ್ ವಿಜ್ಞಾನ ಮತ್ತು ಪದವಿ ಪೂರ್ವ ಕಾಲೇಜು ಸಮಗ್ರ ಪ್ರಶಸ್ತಿಯನ್ನು ತನ್ನ ಮಡಿಲಿಗೇರಿಸಿ ಕೊಂಡಿತು.

ತಾಲ್ಲೂಕು ಮಟ್ಟದ ಸರ್ಕಾರಿ ಪದವಿ ಪೂರ್ವ ಕಾಲೇಜಿನ 2025-26 ನೇ ಸಾಲಿನ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಕ್ರೀಡಾಕೂಟದಲ್ಲಿ ಬಿಜಿಎಸ್ ವಿಜ್ಞಾನ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳು ಎಲ್ಲಾ ಕ್ರೀಡಾ ಕೂಟದಲ್ಲಿ ಭಾಗವಹಸಿ ಮಹಿಳೆಯರ ವಿಭಾಗದಲ್ಲಿ ಸಮಗ್ರ ಪ್ರಶಸ್ತಿ ಪಡೆದುಕೊಳ್ಳುವುದರ ಜೊತೆಗೆ ಇದೇ ಕಾಲೇಜಿನ ವಿದ್ಯಾರ್ಥಿನಿ ಸಿಂಪನ ತಾಲೂಕು ಮಟ್ಟದ ಕ್ರೀಡಾ ಕೂಟದಲ್ಲಿ ಭಾಗವಹಿಸಿ ಚಾಂಪಿಯನ್ ಆಗಿ



ಜಿಲ್ಲಾಮಟ್ಟಕ್ಕೆ ಆಯ್ಕೆಯಾಯಿತು.

ವಾಲಿಬಾಲ್ ಪ್ರಥಮ, ರಿಲೇಯಲ್ಲಿ ಪ್ರಥಮ, ನೂರು, ಇನ್ನೂರು ಮೀಟರ್ ಓಟದಲ್ಲಿ ಪ್ರಥಮ ಹಾಗು ಬಾಲಕರ ವಿಭಾಗದ ರಿಲೇಯಲ್ಲೂ ಪ್ರಥಮ ಸ್ಥಾನ ಪಡೆಯುವುದರ ಜೊತೆ ವೈಯಕ್ತಿಕ ವಿಭಾಗದಲ್ಲಿ ಪ್ರಶಸ್ತಿ ಪಡೆಯುವ ಮೂಲಕ ಕೆಲ ವಿದ್ಯಾರ್ಥಿಗಳು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದು ಇವರು ಜಿಲ್ಲಾ ಮಟ್ಟದಿಂದ ರಾಜ್ಯಮಟ್ಟಕ್ಕೆ ಆಯ್ಕೆಯಾಗುವ ಮೂಲಕ ಸಂಸ್ಥೆಗೆ ತಾಲೂಕಿಗೆ ಕೀರ್ತಿ ತರಲೆಂದು ಸಾಧನೆ ಮಾಡಿದ ಎಲ್ಲಾ ವಿದ್ಯಾರ್ಥಿಗಳಿಗೆ ಸಂಸ್ಥೆಯ ಕಾರ್ಯದರ್ಶಿ ಆದಿಚುಂಚನಗಿರಿ ಶಾಖಾ ಮಾಠದ ಶ್ರೀ ಶಂಬುನಾಥ ಮಹಾಸ್ವಾಮೀಜಿ ವಿದ್ಯಾರ್ಥಿಗಳನ್ನು ಹಾಗು ಪ್ರಾಧ್ಯಾಪಕರಿಗೆ ಅಭಿನಂದನೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಪ್ರಾಂಶುಪಾಲ ದಿವ್ಯಕುಮಾರ್, ದೈಹಿಕ ಶಿಕ್ಷಕ ಪ್ರೀತಂ ಮತ್ತು ಲೋಹಿತ್ ಸೇರಿದಂತೆ ಉಪನ್ಯಾಸಕರು ಹಾಗೂ ಕಾಲೇಜಿನ ಸಿಬ್ಬಂದಿ ವರ್ಗ ಹಾಜರಿದ್ದರು.

## ನಗರದಲ್ಲಿ ಇಂದು ವಿಶ್ವಕರ್ಮ ಜಯಂತಿ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಸೆ.17 ರಂದು ಬೆಳಿಗ್ಗೆ 11 ಗಂಟೆಗೆ ಹಾಸನಾಂಬ ಕಲಾಕ್ಷೇತ್ರದಲ್ಲಿ ವಿಶ್ವಕರ್ಮ ಜಯಂತಿ ಆಯೋಜಿಸಲಾಗಿದೆ.

ಮಾಜಿ ಪ್ರಧಾನ ಮಂತ್ರಿ ಹಾಗೂ ರಾಜ್ಯಸಭಾ ಸದಸ್ಯರಾದ ಹೆಚ್.ಡಿ.ದೇವೇಗೌಡ ಅವರು ಘನ ಉಪಸ್ಥಿತಿ ವಹಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರು ಕಾರ್ಯಕ್ರಮ ಉದ್ಘಾಟನೆ ಮಾಡಲಿದ್ದಾರೆ, ಕರ್ನಾಟಕ ರಾಜ್ಯ ಗೃಹ ಮಂಡಳಿಯ ಅಧ್ಯಕ್ಷರು ಹಾಗೂ ಶಾಸಕಕೆ.ಎಂ.ಶಿವಲಿಂಗೇಗೌಡ ಅವರು ಗೌರವ ಉಪಸ್ಥಿತಿ ವಹಿಸಲಿದ್ದು, ಶಾಸಕ ಸ್ವರೂಪ್ ಪ್ರಕಾಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದ ಶ್ರೇಯಸ್ ಎಂ.ಪಟೇಲ್, ಶಾಸಕರು




ಗಳಾದ ಹೆಚ್.ಡಿ.ರೇವಣ್ಣ, ಡಾ.ಸಿ.ಎನ್. ಬಾಲಕೃಷ್ಣ, ಎ.ಮಂಜು, ಹೆಚ್.ಕೆ. ಸುರೇಶ್, ಸಿಮೆಂಟ್ ಮಂಜು, ವಿಧಾನ ಪರಿಷತ್ ಶಾಸಕರುಗಳಾದ ಮಧು ಜಿ.ಮಾದೇಗೌಡ, ಕೆ. ವಿವೇಕಾನಂದ, ಡಾ|| ಸೂರಜ್ ರೇವಣ್ಣ ಹಾಗೂ ಮಹಾನಗರ ಪಾಲಿಕೆಯ ಮಹಾಪೌರರಾದ ಎನ್. ಹೇಮಲತ ಕಮಲ್‌ಕುಮಾರ್ ಅವರು ಭಾಗವಹಿಸಲಿದ್ದಾರೆ. ಉಡುಪಿ ಜಿಲ್ಲೆಯ ಬಾರ್ಕೂರಿನ ವಾಗ್ಮಿ ಎನ್. ಆರ್ ದಾಮೋದರ ಶರ್ಮ ಅವರು ಉಪನ್ಯಾಸ ನೀಡಲಿದ್ದಾರೆ.

## ಬೇಲೂರಿನಲ್ಲಿ ಮೊಸರು ಗಡಿಗೆ ಉತ್ಸವ



• ಪ್ರಜೋದಯ ವರದಿ

**ಬೇಲೂರು:** ಚೆನ್ನಕೇಶವನ ಅಂಗಳದಲ್ಲಿ ಮೊಸರು ಗಡಿಗೆ ಒಡೆಯುವ ಉತ್ಸವ (ಕಂಸವಧೆ) ಯಾದವ ಸಂಘದ ವತಿಯಿಂದ ಸಂಭ್ರಮದಿಂದ ಜರುಗಿತು. ಶ್ರೀಕೃಷ್ಣ ಜನ್ಮಾಷ್ಟಮಿ ಅಂಗವಾಗಿ ವಿದ್ಯಾರ್ಥಿಗಳು ಶ್ರೀಕೃಷ್ಣ- ರಾಧೆಯ ವೇಷಭೂಷಣದಲ್ಲಿ ಕಂಗೊಳಿಸಿದರು. ತುಂತುರು ಮಳೆಯ ನಡುವೆಯೂ ಉತ್ಸವದಲ್ಲಿ ಭಾಗವಹಿಸಿ ಭಕ್ತಿ ಮೆರೆದ ದೃಶ್ಯ ಮನ ಸೆಳೆಯಿತು. ನೂರಾರು ಭಕ್ತರು ಶ್ರೀಕೃಷ್ಣನ ಭಜನೆ ಮಾಡಿ ಭಕ್ತಿ ಸಮರ್ಪಿಸಿದರು.

ದೇಗುಲದ ರಾಜಗೋಪುರದ ಮುಂದೆ ನಿರ್ಮಿಸಿದ ಕುರುಜಿ ಮಂಟಪದಲ್ಲಿ ಹಾಲು, ಮೊಸರು, ಬೆಣ್ಣೆ, ನವಧಾನ್ಯಗಳಿಂದ ತುಂಬಿದ ಐದು ಮಡಿಕೆಗಳನ್ನು ಎತ್ತರದಲ್ಲಿ ಕಟ್ಟಲಾಗಿತ್ತು. ಶ್ರೀಕೃಷ್ಣ ಜಯ ಘೋಷದ ನಡುವೆ ಯಾದವ ಸಂಘದ 20ಕ್ಕೂ ಹೆಚ್ಚು ಯುವಕರು ಪಾಳಿಯಂತೆ ಏರಿ ಮಡಿಕೆಗಳನ್ನು ಒಂದರ ಹಿಂದೆ ಒಂದು ಒಡೆದು ಭಕ್ತಿಸಂಭ್ರಮಕ್ಕೆ ಮುಕ್ತಾಯ ನೀಡಿದರು.

ದೇಗುಲದ ಆಗಮಿಕ ಅರ್ಚಕರಾದ ಶ್ರೀನಿವಾಸಸ್ವಾಮಿ ಭಟ್ಟರ್, ನರಸಿಂಹ ಭಟ್ಟರ್, ಯಾದವ ಸಂಘದ ಅಧ್ಯಕ್ಷ ರಮೇಶ್, ಗೌರವಾಧ್ಯಕ್ಷ ಅಣ್ಣೇಗೌಡ, ಕಾರ್ಯಾಧ್ಯಕ್ಷ ಎಸ್.ಕೆ. ನಾಗೇಶ್, ಬಿ.ಸಿ.ಆನಂದ್, ಪರುಷೋತ್ತಮ್, ರವಿ, ಆಡಿಟರ್ ಕೃಷ್ಣಮೂರ್ತಿ ಇದ್ದರು.

## ಇಂದು ವಿಚಾರಗೋಷ್ಠಿ

• ಪ್ರಜೋದಯ ವರದಿ

**ಹಾಸನ:** ನಗರದ 80 ಫೀಟ್ ರಸ್ತೆಯಲ್ಲಿರುವ ತಾಜ್ ಕನ್ವೆನ್ಷನ್ ಸೆಂಟರ್‌ನಲ್ಲಿ ಸೆ.17 ರಂದು ಸಂಜೆ 7 ಗಂಟೆಗೆ ನ್ಯಾಯದ ಹರಿಕಾರ ಪೈಗಂಬರ್ ಮುಹಮ್ಮದ್ ಕುಂಞ ವಿಚಾರ ಗೋಷ್ಠಿಯನ್ನು ಏರ್ಪಡಿಸಲಾಗಿದೆ.

ಮಂಗಳೂರು ಶಾಂತಿ ಪ್ರಕಾಶನ ವ್ಯವಸ್ಥಾಪಕ ಜ|| ಮುಹಮ್ಮದ್ ಕುಂಞ ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ನಗರದ ವಕೀಲ ಮತ್ತು ಪರಿಸರ ಕಾರ್ಯಕರ್ತ ಹೆಚ್.ಎ.ಕಿಶೋರ್ ಕುಮಾರ್ ಹಾಗೂ ಬೌದ್ಧ ಮಹಾಸಭಾದ ಎಂ.ಬಿ.ವೀರಭದ್ರಪ್ಪ ಅವರು ಆಗಮಿಸಲಿದ್ದಾರೆ.

ಮಹಾನಗರ ಪಾಲಿಕೆ ಸದಸ್ಯ ಹೆಚ್.ಎಂ.ಪ್ರಕಾಶ್, ನಗರಸಭೆ ಮಾಜಿ ಸದಸ್ಯ, ಎಂ.ಕೆ.ಕಮಲ್ ಕುಮಾರ್, ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ರಂಗನಾಥ, ಶ್ರೀತೇಜ್ ಫೌಂಡೇಶನ್‌ನ ಪ್ರಣವ ಶ್ರೀತೇಜ, ಹಾಸನ ನ್ಯೂಸ್‌ ಇಂದುಧರ ರಾಮ್, ವಕೀಲ ಅನ್ಷಾದ್ ಪಾಳ್ಯ, ಸಯ್ಯದ್ ಇಬ್ರಾಹಿಂ, ನೂರುಲ್ಲಾ ಮನ್ಸೂರಿ ಇನ್ನಿತರರು ಭಾಗವಹಿಸಲಿದ್ದಾರೆ.

## ಸಮೀಕ್ಷೆ: ಶಿಕ್ಷಕರಿಗೆ ವಿನಾಯಿತಿ ನೀಡಿ



• ಪ್ರಜೋದಯ ವರದಿ

**ಸಕಲೇಶಪುರ:** ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ನಡೆಯುತ್ತಿರುವ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷಾ ಕಾರ್ಯದಿಂದ ಕೆಲವು ಶಿಕ್ಷಕರು ಮತ್ತು ನೌಕರರಿಗೆ ವಿನಾಯಿತಿ ನೀಡುವಂತೆ ಒತ್ತಾಯಿಸಿ ಶಿಕ್ಷಕರು ಉಪವಿಭಾಗಾಧಿಕಾರಿ ರಾಜೇಶ್ ಅವರಿಗೆ ಮನವಿ ಸಲ್ಲಿಸಿದರು.

ಪಟ್ಟಣದ ಸಂತ ಜೋಸೆಫರ ಶಾಲೆಯಲ್ಲಿ ಸಮೀಕ್ಷಾ ತರಬೇತಿ ಕಾರ್ಯಾಗಾರ ಪ್ರಾರಂಭವಾಗುವುದಕ್ಕೆ ಮುನ್ನ ಶಿಕ್ಷಕರು ಮನವಿ ಸಲ್ಲಿಸಿ, ಸೆಪ್ಟೆಂಬರ್ 22 ರಿಂದ ಅಕ್ಟೋಬರ್ 7ರ ವರೆಗೆ ನಡೆಯಲಿರುವ ಸಮೀಕ್ಷಾ ಕಾರ್ಯಕ್ಕೆ 55 ವರ್ಷ ಮೇಲ್ಪಟ್ಟ ನಿವೃತ್ತಿ ಅಂಚಿನಲ್ಲಿರುವ ಶಿಕ್ಷಕರು ಹಾಗೂ ನೌಕರರು, ಗರ್ಭಿಣಿಯರು, ಬಾಣಂತಿಯರು, ವಿಕಲಚೇತನರು, ಅನಾರೋಗ್ಯ ಪೀಡಿತರನ್ನು ನಿಯೋಜಿಸುತ್ತಿರುವುದು ಸರಿಯಾದ ಕ್ರಮವಲ್ಲ. ಮಾನಸಿಕ ಹಾಗೂ ದೈಹಿಕ ಆರೋಗ್ಯದ ದೃಷ್ಟಿಯಿಂದ ಇಂತಹ ನೌಕರರನ್ನು ಸಮೀಕ್ಷಾ ಕಾರ್ಯದಿಂದ ವಿನಾಯಿತಿ ನೀಡಬೇಕೆಂದು ಒತ್ತಾಯಿಸಲಾಗಿದೆ.

ಈ ಸಂದರ್ಭದಲ್ಲಿ ತಹಸೀಲ್ದಾರ್ ಸುಪ್ರೀತಾ, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ತಮ್ಮಣ್ಣಶೆಟ್ಟಿ, ಕಾರ್ಯದರ್ಶಿ ಜಗದೀಶ್ ಇನ್ನಿತರರು ಉಪಸ್ಥಿತರಿದ್ದರು.

# ಕಾರ್ಯಾನುಭವ ಶಿಬಿರದಲ್ಲಿ ರೇಷ್ಮೆ ಕೃಷಿ ಮಾಹಿತಿ

• ಪ್ರಜೋದಯ ವರದಿ

**ಹಾಸನ:** ಕಾರೆಕೇರೆ ಕೃಷಿ ಮಹಾವಿದ್ಯಾಲಯದ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದಲ್ಲಿ ವಿದ್ಯಾರ್ಥಿಗಳು ತಾಲ್ಲೂಕಿನ ಹಂಪನಹಳ್ಳಿ ಗ್ರಾಮದ ರೈತರಿಗೆ ರೇಷ್ಮೆ ಕೃಷಿಯ ಮಹತ್ವ ಹಾಗು ಕೊಯ್ಲೋತ್ತರ ತಂತ್ರಜ್ಞಾನ ಕುರಿತು ಅರಿವು ಮೂಡಿಸಿದರು.

ರೇಷ್ಮೆ ಕೃಷಿ ಕುರಿತು ನಡೆದ ಕಾರ್ಯಕ್ರಮದಲ್ಲಿ ಕೃಷಿ ಕೀಟಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಸೌಮ್ಯ ಮಾತನಾಡಿ, ರೇಷ್ಮೆ ಹುಳುಗಳನ್ನು ಸಾಕುವ ಮೂಲಕ ರೇಷ್ಮೆ ಉತ್ಪಾದನೆ ಮಾಡುವ ಈ ಕೃಷಿ ಚಟುವಟಿಕೆಯಲ್ಲಿ ಹಿಪ್ಪನೇರಳೆ ಗಿಡಗಳ ಎಲೆಗಳು ಮುಖ್ಯ ಆಹಾರವಾಗಿದೆ. ಹುಳುಗಳು ಕಟ್ಟುವ ಗೂಡುಗಳಿಂದ ಕಚ್ಚಾ ರೇಷ್ಮೆ ದಾರವನ್ನು ತೆಗೆಯಲಾಗುತ್ತದೆ.

ಹಿಪ್ಪನೇರಳೆ ತಳಿಗಳ ಬೆಳೆದು, ಹುಳುಗಳ ಸಾಕಾಣಿಕೆ ನಡೆಸಿ, ಕೊನೆಗೆ ಗೂಡುಗಳಿಂದ ದಾರ ತೆಗೆಯುವ ಪ್ರಕ್ರಿಯೆ ಮೂಲಕ ಉತ್ತಮ ಆದಾಯ ಗಳಿಸಬಹುದಾಗಿದೆ. ಸರ್ಕಾರದಿಂದ ತರಬೇತಿ ಹಾಗು ಸಬ್ಸಿಡಿ ಸೌಲಭ್ಯ



ದೊರೆಯುವುದರಿಂದ ರೈತರು ಈ ಕೃಷಿಯಿಂದ ಆರ್ಥಿಕವಾಗಿ ಲಾಭ ಪಡೆಯಬಹುದು ಎಂದು ತಿಳಿಸಿದರು. ಪ್ರಗತಿಪರ ರೈತ ವೆಂಕಟೇಶ್‌ಗೌಡ ಅವರು ರೇಷ್ಮೆ ಕೃಷಿಯ ಅನುಭವವನ್ನು ಹಂಚಿಕೊಂಡರು.

ಇದೇ ಸಂದರ್ಭದಲ್ಲಿ ಕೃಷಿ ಮತ್ತು ಆಹಾರ ತಂತ್ರಜ್ಞಾನ ವಿದ್ಯಾರ್ಥಿಗಳು ಆಯೋಜಿಸಿದ್ದ ಕೊಯ್ಲೋತ್ತರ ತಂತ್ರಜ್ಞಾನ ಕುರಿತು ಅರಿವು ಕಾರ್ಯಕ್ರಮದಲ್ಲಿ ತೋಟಗಾರಿಕೆ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಕಿರಣ್ ಸಾಗರ್ ಅವರು, ಕೊಯ್ಲಿನ ನಂತರ ಬೆಳೆಗಳನ್ನು ಸಂಸ್ಕರಿಸುವುದು, ಶೇಖರಿಸುವುದು ಹಾಗು ಮಾರುಕಟ್ಟೆಗೆ ಸಿದ್ಧಪಡಿಸುವ ತಂತ್ರಗಳನ್ನು ಒಟ್ಟಾಗಿ ಕೊಯ್ಲೋತ್ತರ ತಂತ್ರಜ್ಞಾನವೆಂದು ಕರೆಯಲಾಗುತ್ತದೆ ಎಂದು ಅವರು ವಿವರಿಸಿದರು.

ಉತ್ಪನ್ನಗಳನ್ನು ವರ್ಗೀಕರಿಸಿ ಸ್ವಚ್ಛಗೊಳಿಸುವುದರಿಂದ ಹಿಡಿದು ಪೂರ್ವ- ತಂಪಾಗಿಸುವಿಕೆ, ಪ್ಯಾಕೇಜಿಂಗ್, ಶೇಖರಣೆ, ಸಂಸ್ಕರಣೆ ಹಾಗು ಸಾಗಾಣಿಕೆ ಹಂತಗಳಲ್ಲಿ ಅನುಸರಿಸುವ ಕ್ರಮಗಳು, ಬೆಳೆಗಳ ಗುಣಮಟ್ಟವನ್ನು ಕಾಪಾಡುವುದಲ್ಲದೆ ಅವುಗಳ ಜೀವಿತಾವಧಿಯನ್ನು ಹೆಚ್ಚಿಸಿ ಮೌಲ್ಯವರ್ಧನೆ ಮಾಡುತ್ತವೆ. ಉದಾಹರಣೆಗೆ ಟೊಮ್ಯಾಟೊವನ್ನು ನೇರವಾಗಿ ಮಾರಾಟ ಮಾಡುವ ಬದಲು ಅದರಿಂದ ಕೆಚಪ್ ಮತ್ತು ಚಿಪ್ಸ್ ತಯಾರಿಸುವುದರಿಂದ ರೈತರಿಗೆ ಹೆಚ್ಚುವರಿ ಆದಾಯ ಲಭ್ಯವಾಗುತ್ತದೆ ಎಂದು ತಿಳಿಸಿದರು.

